"ಶ್ರೀಪತಿರ್ಮಾನದೋ ನಃ"

ಶ್ರೀಹರಿದಾಸಭಾರತೀ

(ಶ್ರೀಹರಿದಾಸಸಾಹಿತ್ಯಪ್ರಚಾರಕ್ಕಾಗಿ ಮೀಸಲಾದ ಮಾಸಪತ್ರಿಕೆ)

ಸಂಪುಟ ೧ | ಶ್ರೀ ಖರ—ವೈಶಾಖ-ಜ್ಯೇಷ್ಠ (೧೯೫೧—ಮೇ-ಜೂನ್) | ಸಂಚಿಕೆ ೭-೮

ಬಿಡಿ ಪ್ರತಿ

೪ ಆಣೆ

ವಾರ್ಷಿಕ ಚಂದಾ

೨ ರೂಪಾಯಿಗಳು

ಸಂಪಾದಕರು;

ಶ್ರೀಹರಿದಾಸರತ್ನಂ ಗೋಪಾಲದಾಸರು

ಶ್ರೀ ರಾಘವೇಂದ್ರ ಕಾಲೋನಿ, ಚಾಮರಾಜಪೇಟೆ, ಬೆಂಗಳೂರು-೨

ವಿಷಯಾನುಕ್ರಮಣಿಕೆ

ಮಂಗಳಾಚರಣೆ [ರಾಗ-ಕಲ್ಯಾಣಿ ತಾಳ-ಝಂಪೆ]	೧
ದೇವ ಬಂದ...!	೨
ಶ್ರೀ ವಾದಿರಾಜಸ್ವಾಮಿಗಳವರು	೪
ವೇದವೂ ಗುರುಭಕ್ತಿಯೂ	೧೪
ಶ್ರೀನರಸಿಂಹ ಸುಳಾದಿ	೧೮
ಪತಿವ್ರತಾಲಕ್ಷಣ ಸುಳಾದಿ	೨೨
ಸಾಧನ ಸಂಪತ್ತು	೨೬
ಸಂಪಾದಕೀಯ	೩೧
ಶ್ರೀ ಗುರುತಿಲಕ ಶ್ರೀಪಾದರಾಯರು	೩೫
"ತಿಳಕೊ ನಿನ್ನೊಳಗೆ ನೀನೇ"	೩೬
ತತ್ವಸುವಾಲಿ	೭೫

ಚಂದಾ ಸಲ್ಲಿಸದವರಲ್ಲಿ ವಿನಂತಿ

ಪತ್ರಿಕೆಯು ಪ್ರಾರಂಭವಾಗಿ ಎಂಟು ತಿಂಗಳ ಸಂಚಿಕೆಗಳೂ ತಮ್ಮ ಕೈ ಸೇರುವಂತೆ ಆದುದಕ್ಕೆ ತಮ್ಮೆಲ್ಲರ ಸಹಕಾರವೇ ಕಾರಣ ಎಂದು ನಂಬಿದ್ದೇವೆ. ಈ ಪತ್ರಿಕೆಯು ಶಾಶ್ವತವಾಗಿ ಶ್ರೀಹರಿದಾಸ-ಸಾಹಿತ್ಯಸೇವೆ ಮಾಡಲು ತಮ್ಮಗಳ ಹೆಚ್ಚಿನ ಸಹಕಾರವು ಅತ್ಯವಶ್ಯವಾಗಿದೆ. ಪತ್ರಿಕೆಯು ತನ್ನ ಎರಡನೆಯ ಸಂಪುಟದಲ್ಲಿ ಅಡಿಯಿಡುವ ಕಾಲ ಸಮೀಪಿಸುತ್ತ ಬಂತು, ಹೀಗಿರುವಾಗ ಈ ವರ್ಷದ ಚಂದಾ ಹಣ ಕಳುಹಿಸದಿರುವುದರಿಂದ ಪತ್ರಿಕೆಯ ಪ್ರಚಾರಕ್ಕೆ ಕುಂದು ಬಂದೀತೆಂಬ ಗಾಬರಿ ನಮಗೆ ಒಡಮೂಡಿದೆ. ಆದುದರಿಂದ ದಯಮಾಡಿ ಚಂದಾಹಣವನ್ನು ಬೇಗ ಕಳುಹಿಸಿಕೊಡುವುದಲ್ಲದೆ ಹೊಸ ಹೊಸ ಚಂದಾದಾರರನ್ನು ಕೂಡಿಸಿ, ಪತ್ರಿಕೆಯ ಏಳಿಗೆಗೆ ಸಹಕರಿಸಬೇಕಾಗಿ ವಿನಂತಿ.

—ಸಂಪಾದಕ

ಸಿದ್ಧವೆನಿಸುವುದರಿಂದ| ಅಣುಗನಿಗೆ
ಇದ್ದ ಮದ್ದೀವೆ ಚಂದ| ಮರುಳೆ ೯

ವೇದಾಂತಶಾಸ್ತ್ರವನು ಓದಿ ವಿದ್ಯಾರ್ಥಿಗಳಿ–
ಗೋದನೋದಕವ ಕೊಟ್ಟು| ಪ್ರವಚನದ
ನಾದವುಂಟೇನೊ ಗುಟ್ಟು| ಯದ್ಯಪಿ
ಸಾಧಿಸೀ ನುಡಿ ಮನವನಿಟ್ಟು| ಮಿಥ್ಯಾ
ವಾದಿಗಾದರು ಕೃತ್ಯವೇನಸಾಧ್ಯವೊ| ಮರುಳೆ ೧೦

ರಾಗತಸ್ಸಂಪ್ರಾಪ್ತವಾಗಿರುವ ಕೆಲವು ಬಹು–
ಶಾಗಮದಿ ಸಿದ್ಧವಾದ| ಚರ್ಯಗಳ
ಹೀಂಗಿತರಸಾಧಾರಣಾದ| ಕರ್ಮಗಳ
ನಾಗಾದಿ ಮಾನುಷ್ಯವಾದ| ಸೃಜಿಸುವುದೆ
ನಾಗಶಯನನಿಗೆ ಮೋದ| ಮರುಳೆ ೧೧

ಈ ಪರಿಯಲಿರುವಂಥ ವ್ಯಾಪಾರಗಳ ನೋಡಿ
ನಾ ಪಾರಗಾಣುವ ಸುಪಥ| ಯಿಲ್ಲೆಂದು
ಕೋಪದಲಿ ನುಡಿಯೆ ಕುಪಥ| ನೀನು ಬಲು ಸಂ–
ತಾಪ ಪಡಲು ವ್ಯರ್ಥ| ನಿನ್ನಷ್ಟು
ಇತರಿಗಾರಿಗು ಇಲ್ಲ ಸಂಪತ್ತು ಮರುಳೆ ೧೨

ಆವಾವಕರ್ಮದಿಂದಾವಾವವಿದ್ಯೆಯಿಂ–
ಗೋವಿಂದ ಪ್ರೀತನಾಗಿ| ಸುಜ್ಞಾನ
ವೀವಭವಬಂಧನೀಗಿ| ತದ್ವಿದ್ಯೆ
ಭುವನ ಸುಖವೆಂದು ಬಾಗಿ| ಸರ್ವತ್ರ
ಚವನ ಭಯಕಳೆಯೆ ಯೋಗೀ| ಮರುಳೆ ೧೩

ಮಣಿಯು ಸಿಕ್ಕಿರಲದನು ತೃಣಮಾಡಿನಿಷ್ಕಕ್ಕೆ
ದಣಿದು ನೀಚತ್ವವನ್ನು। ಪಡೆಯದೆ
ಗುಣಿಸೊ ನಾಮಾರ್ಥವನ್ನು। ಎಚ್ಚರದೆ
ಮಣಿಸಿ ಈ ದೇಹವನ್ನು। ಯಿಲ್ಲಿರಿಸಿ
ಉಣಬ್ಯಾಡ ದುಃಖವನ್ನು। ಮರುಳೆ ೧೩

ಭರತಖಂಡದೊಳು ಭೂಸುರಜನ್ಮ। ಸರ್ವಜ್ಞ-
ವರಶಾಸ್ತ್ರದಧಿಕಾರವ। ಕಳಕೊಳದೆ
ಚರಮಸೌಭಾಗ್ಯೋದ್ಭವ। ಜ್ಞಾನದಿಂ
ವಿರಕುತಿಯ ಮೂಲಭಾವ। ಪಡೆಯೊ ನೀ
ನೃಹರಿರಘುಪತಿಯ ಸುಪ್ರೇಮ ಪಡಿ ಮರುಳೆ ೧೪

॥ಶ್ರೀಃ॥

ಶ್ರೀ ಮೋಹನದಾಸಾರ್ಯರ ಸ್ತೋತ್ರ

ಮಾಂಡ್ ಆದಿತಾಳ

ಪಾಹಿ-ಪಾಹಿ-ಪಾಹಿ | ಗುರು | ಮೋಹನರಾಯ ಪಾಹಿ ಪಾಹಿ ॥ಪ॥
ಪಾಹಿ ಪಾಹಿ ಗುರುಮೋಹನಸಿಂಧುರ ಶ್ರೀಹರಿಪಾದಪಂಕೇರುಹಭಜಕ ಅ॥ಪ॥

ನವವಿಧಭಕುತೆಂಬೊ ಸರಪಳಿಗಳೊಳು
ನವನವರೂಪದಿ ನಲಿವ ಸುಧೀರ ॥೧॥

ಪದುಮ ನಾಭನ ಧ್ಯಾನದ ಮದವೇರಿ
ಪದೋಪದಿಗೆ ಹರಿಪದಾವ ಗಾಹೀ ॥೨॥

ವಿಜಯದಾಸರ ಪದರಜವ ಧರಿಸಿ ನೀ-
ರಜಪ್ರಾಣೇಶ ವಿಠಲ್ಲನರಿಸಿದಿ ॥೩॥

ಟಿಪ್ಪಣಿ:— (ನುಡಿಗಳನ್ನು ಎತ್ತುವಾಗ "ಪಾಹಿ ಪಾಹಿ" ಎಂದು ಎರಡು ಬಾರಿ ಮಾತ್ರ ಹಾಡಿಕೊಳ್ಳಬೇಕು.)

"ಶ್ರೀಪತಿರ್ಜ್ಞಾನದೋ ನಃ"

ಶ್ರೀಹರಿದಾಸಭಾರತೀ

[ಶ್ರೀಹರಿದಾಸಸಾಹಿತ್ಯಪ್ರಚಾರಕ್ಕಾಗಿ ಮೀಸಲಾದ ಮಾಸಪತ್ರಿಕೆ]

ಪವಮಾನಮತಪಿಡಿದು ನಿನ್ನ ಶ್ರವಣ ಮಾ-
ಡುವರ ಸಂಗ ಪಾಲಿಸು ವಿಜಯವಿಠ್ಠಲ ವಲಿದು

ಸಂಪುಟ ೧ | ಶ್ರೀ ಖರ—ವೈಶಾಖ-ಜ್ಯೇಷ್ಠ (೧೯೫೧—ಮೇ-ಜೂನ್) | ಸಂಚಿಕೆ ೭-೮

ಮಂಗಳಾಚರಣೆ

ಇದು ಭಾಗ್ಯ !

ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ ಪ
ಪದುಮನಾಭನಪಾದಭಜನೆ ಸುಖವಯ್ಯ ಅ.ಪ

ಕಲ್ಲಾಗಿರಲಿಬೇಕು ಕಠಿಣಭವಶರಧಿಯೊಳು
ಬಿಲ್ಲಾಗಿಯಿರಬೇಕು ಬಲ್ಲವರ ಮುಂದೆ
ಮೆಲ್ಲನೆ ಮಾಧವನ ಮನವ ಮೆಚ್ಚಿಸಬೇಕು
ಬೆಲ್ಲವಾಗಿರಬೇಕು ಭಕತಜನಗಳಿಗೆ ೧

ಬುದ್ಧಿಯಲಿ ತನುಮನವ ತಿದ್ದುತಲಿಯಿರಬೇಕು
ಮುದ್ದಾಗಿಯಿರಬೇಕು ಮುನಿಯೋಗಿಗಳಿಗೆ
ಮಧ್ವಮತಅಬ್ಧಿಯೊಳು ಮೀನನಾಗಿರಬೇಕು
ಶುದ್ಧವಾಗುಣಬೇಕು ಹರಿಕಥಾಮೃತವ ೨

ವಿಷಯಭೋಗದ ತೃಣಕೆ ಉರಿಯಾಗಿ ನಿಲಬೇಕು
ಕೃಷಿಯು ಮಾಡಲಿಬೇಕು ಸಚ್ಛಾಸ್ತ್ರಗಳನು
ಝಷಕೇತುಜನಕ ಶ್ರೀ ಪುರಂದರವಿಠ್ಠಲನ-
ವಿಷಯ ವಿಷಯದಿ ನೆನೆವ ಮತಿಯಿರಲಿಬೇಕು ೩

ದೇವ ಬಂದ....!

ರಾಗ—ಜಂಜೂಟಿ   ತಾಳ—ಆದಿ

[ಹಲವೆಡೆಗಳಲ್ಲಿ ಈ ನಾಮದ ೩ ಅಥವಾ ೫ ನುಡಿಗಳು ಮಾತ್ರ ಪ್ರಚಾರದಲ್ಲಿವೆ. ಹಳೆಯ ಕಡತಗಳಲ್ಲಿ ದೊರೆತ ೧೫ ನುಡಿಗಳನ್ನೂ ಇಲ್ಲಿ ಕೊಡಲಾಗಿದೆ. —ಸಂ.]

ದೇವ ಬಂದ ನಮ್ಮ ಸ್ವಾಮಿ ಬಂದನೋ
ದೇವರದೇವಶಿಖಾಮಣಿ ಬಂದನೋ ಪ

ಮತ್ಸ್ಯಾವತಾರ ಬಂದ ಸ್ವಚ್ಛವೇದವ ತಂದ
ಅಚ್ಯುತಾನಂತಮಧುಸೂದನ ಬಂದನೋ ೧

ಮಂದರೋದ್ಧಾರ ಬಂದ ಮಾಮನೋಹರ ಬಂದ
ಬೃಂದಾವನಪತಿ ಗೋವಿಂದ ಬಂದನೋ ೨

ಸೂಕರರೂಪ ಬಂದ ಸುರಮುನಿವಂದ್ಯ ಬಂದ
ನಾಕಜನರಿಗೊಲಿದು ವಸುಧೆಯ ತಂದನೋ ೩

ನರಹರಿರೂಪ ಬಂದ ನರಕೋದ್ಧಾರ ಬಂದ
ತರಳನ ಕಾಯ್ದು ಹಿರಣ್ಯಕನ ಕೊಂದನೋ ೪

ವಾಮನನಾಗಿ ಬಂದ ಭೂಮಿ ಬೇಡುತ ನಿಂದ
ವ್ಯೋಮಕೆ ಬೆಳೆದ ತ್ರಿವಿಕ್ರಮ ಬಂದನೋ ೫

ಪರಶುರಾಮನು ಬಂದ ದುರುಳ ಕ್ಷತ್ರಿಯರ ಕೊಂದ
ಪರಮಪಾವನ ನಮ್ಮ ಪೊರೆವನು ಬಂದನೋ ೬

ದಶರಥಸುತ ಬಂದ ದಶಮುಖನರಿ ಬಂದ
ವಸುಧೆಸುತೆಯಪತಿ ಹಸನ್ಮುಖ ಬಂದನೋ ೭

ದೇವಕಿಸುತ ಬಂದ ಮಾವನ ಪೋಗಿ ಕೊಂದ
ಐವರಿಗೊಲಿದಂಥ ಶ್ರೀವರ ಬಂದನೋ ೮

ಬೌದ್ಧರೂಪನು ಬಂದ ಭುಜಗಶಯನ ಬಂದ
ಮುದ್ದುಮೋಹಿನಿಯರ ಮೋಹಿಸಿ ನಿಂದನೋ ೯

ಕಲ್ಕಿರೂಪನು ಬಂದ ಕಲಿಯ ಕಾಣುತ ಕೊಂದ
ಶಿಲ್ಕುವೆ ಭಕುತಂಗೆನ್ನುತಾ ನಿಂದನೋ ೧೦

ಉರಗಶಯನ ಬಂದ ಗರುಡಗಮನ ಬಂದ
ನರಗೊಲಿದವ ಬಂದ ನಾರಾಯಣ ಬಂದನೋ ೧೧

ಶಂಖಚಕ್ರವ ಧರಿಸಿ ಕಂಕಣ ಕೈಯಲ್ಲಿರಿಸಿ
ಪಂಕಜನಾಭ ತಾ ಪಾಲಿಸಲು ಬಂದನೋ ೧೨

ಬೆಟ್ಟದಮೇಲಿದ್ದು ಭಕುತರ ಸಲಹುವ
ಸೃಷ್ಟಿಸ್ಥಿತಿಲಯಕರ್ತನು ಬಂದನೋ ೧೩

ಜಗವನುದ್ಧರಿಸುತ್ತ ಖಗವಾಹನ ಬಂದ
ತ್ರಿಜಗಕಧಿಕ ಶೇಷನಗದಲಿ ನಿಂದನೋ ೧೪

ನಿಗಮಗೋಚರ ಬಂದ ನಿತ್ಯತೃಪ್ತನು ಬಂದ
ನಗೆಮುಖ ಪುರಂದರವಿಠಲನು ಬಂದನೋ ೧೫

ಶ್ರೀ ವಾದಿರಾಜಸ್ವಾಮಿಗಳವರು

ಲೇಖಕರು:
ಶ್ರೀ ಯಂ. ರಾಮರಾಯರು
ಸಂಪಾದಕರು: "ಸುಬೋಧ", ಬೆಂಗಳೂರು.

★

**ತಪೋವಿದ್ಯಾವಿರಕ್ತ್ಯಾದಿಸದ್ಗುಣೌಘಾಕರಾನಹಂ
ವಾದಿರಾಜಗುರೂನ್ ವಂದೇ ಹಯಗ್ರೀವದಯಾಶ್ರಯಾನ್**

ಭವಿಷ್ಯತ್ಸಮೀರಪದಸ್ಥರೆಂದು ಸುವಿಖ್ಯಾತರಾದ ಶ್ರೀ ವಾದಿರಾಜಸ್ವಾಮಿಗಳವರ ಮಹಿಮೆ ಅಗಾಧವಾದುದು. ಶ್ರೀಮದಾನಂದತೀರ್ಥ-ಭಗವತ್ಪಾದರ ಸತ್ಸಿದ್ಧಾಂತವನ್ನನುಸರಿಸಿ ಮಧ್ವಮತವನ್ನುದ್ಧರಿಸಿದ ಮಹಾನುಭಾವರ ವರ್ಗದಲ್ಲಿ ಶ್ರೀ ವಾದಿರಾಜಸ್ವಾಮಿಗಳವರಿಗೂ ಅಗ್ರಪೀಠ ಉಂಟು. ಶ್ರೀ ವ್ಯಾಸರಾಯಸ್ವಾಮಿಗಳವರಂತೆಯೇ ಶ್ರೀ ವಾದಿರಾಜರೂ ಅಗಾಧ ಸಂಸ್ಕೃತಪಂಡಿತರಾಗಿ ಆ ಗೀರ್ವಾಣವಾಣಿಯಲ್ಲಿ ಪ್ರೌಢಗ್ರಂಥಗಳನ್ನು ರಚಿಸಿ ಪಂಡಿತವರ್ಗಕ್ಕೆ ಮಹೋಪಕಾರ ಮಾಡಿರುವಂತೆಯೇ [redacted]

ಒಂದು ಪುತ್ರರತ್ನವು ಜನಿಸಿತು. ಶ್ರೀ ಶ್ರೀಗಳವರ ಭವಿಷ್ಯದ್ವಾಣಿಯಂತೆಯೇ ಮಂಗಳಸ್ನಾನಾನಂತರ ಶಿಶುವನ್ನು ಬಂಗಾರದ ಹರಿವಾಣದಲ್ಲಿಟ್ಟು ಮಠಕ್ಕೆ ತರಿಸಿಕೊಂಡ ಶ್ರೀ ವಾಗೀಶತೀರ್ಥರವರು, ಕಮಂಡಲೋದಕವನ್ನು ಪ್ರೋಕ್ಷಿಸಿ, ಮೂವತ್ತೆರಡು ಸಲ್ಲಕ್ಷಣಗಳಿಂದಲೂ ನೇತ್ರಾನಂದಕರವಾಗಿದ್ದ ಆ ಶಿಶುವನ್ನು ನೋಡಿ ಪರಮಾನಂದಗೊಂಡರು. ಅದಿತೀದೇವಿಯ ಗರ್ಭದಲ್ಲುದಿಸಿದ ವಾಮನನಂತೆ, ಶ್ರೀಗೌರೀದೇವಿಯ ಉದರಸಂಜಾತನಾದ ಆ ಶಿಶುವಿಗೆ ಭೂವರ ಅಥವಾ ಭೂವರಾಹನೆಂಬುದಾಗಿ ನಾಮಕರಣ ಮಾಡುವಂತೆ ಆಜ್ಞಾಪಿಸಿದರು.

ಭೂವರಾಹನು ಮಹಾತ್ಮರಾದ ವಾಗೀಶತೀರ್ಥರ ಪರಮಾರೈಕೆಯಲ್ಲಿ ನೋಡಿದವರ ಕಣ್ಮನಗಳನ್ನಾಕರ್ಷಿಸುವಂತಹ ದಿವ್ಯಸುಂದರವಿಗ್ರಹನಾಗಿ ಬೆಳೆದನು. ಬಡಬ್ರಾಹ್ಮಣನ ಪುತ್ರನಾದ ಆ ಬಾಲಕನಿಗೆ ಕಾಲಕಾಲಕ್ಕೆ ನಡೆಯಬೇಕಾದ ಚೌಲೋಪನಯನಾದಿಗಳೆಲ್ಲ ಶ್ರೀ ಶ್ರೀಗಳವರ ಅನುಗ್ರಹ ದಿಂದಲೇ ನೆರವೇರಿ ಅವರ ಸನ್ನಿಧಿಯಲ್ಲೇ ಶಾಸ್ತ್ರಾಭ್ಯಾಸಂಗವೂ ಅಖಂಡವಾಗಿ ಸಾಗಿತು. ವಟು ಭೂವರಾಹನು ಶ್ರೀಹಯಗ್ರೀವಮಂತ್ರೋಪದೇಶವನ್ನು ಪಡೆದು, ವೇದಶಾಸ್ತ್ರಾದಿ ಪಾಂಡಿತ್ಯದಲ್ಲೂ, ವಾಕ್ಪಟುತ್ವದಲ್ಲೂ ತನ್ನ ಸಹಾಧ್ಯಾಯಿಗಳಲ್ಲೆಲ್ಲ ಉತ್ತಮೋತ್ತಮನೆನಿಸಿ ಶ್ರೀ ಶ್ರೀಗಳವರ ಅತಿಶಯ ಮೆಚ್ಚಿಗೆಯ ಶಿಷ್ಯನೆನಿಸಿಕೊಂಡನು. ಶ್ರೀ ವಾಗೀಶರು ಬಾಲಕನಿಗೆ ನ್ಯಾಯವೇದಾಂತಶಾಸ್ತ್ರಗಳನ್ನು ಪಾಠಮಾಡಿಸಿದರು. ಸಾಂಗ ವೇದಾಧ್ಯಯನವಾಯಿತು. ಸಾಮವೇದದಲ್ಲಿ ವಟು ಭೂವರಾಹನು ಅದ್ವಿತೀಯನೆನಿಸಿದನು.

ಒಮ್ಮೆ ಶ್ರೀ ವಾಗೀಶತೀರ್ಥರು ತಮ್ಮ ಶಿಷ್ಯರೆಲ್ಲರಲ್ಲೂ, ಕೇವಲ ಅಶನಾರ್ಥಿಗಳ್ಯಾರು, ನಿಜವಾಗಿ ವಿದ್ಯಾರ್ಥಿಗಳ್ಯಾರು ಎಂಬುದನ್ನು ಕಂಡುಹಿಡಿಯಲು, ಒಂದೆಡೆಯಲ್ಲಿ ವಿವಿಧ ಫಲಗಳು, ಬೇರೊಂದೆಡೆಯಲ್ಲಿ ವಸ್ತ್ರಾದಿಗಳು, ಪುಸ್ತಕಗಳು ಹೀಗೆ ಸಾಲಾಗಿಡಿಸಿ ಅವರವರ ಇಚ್ಛಾನುಸಾರ ಬೇಕಾದವರು ಬೇಕಾದುವನ್ನು ತೆಗೆದುಕೊಳ್ಳಲು ಅನುಮತಿಕೊಟ್ಟರಂತೆ! ಆಗ ಆ ಶಿಷ್ಯರಲ್ಲನೇಕರು ನಾನು ತಾನೆಂದು ಮುಂದೆಬಿದ್ದು ತಮಗೆ ಬೇಕಾದ ವಸ್ತುಗಳನ್ನು ತೆಗೆದುಕೊಂಡರಂತೆ! ಬಾಲಕ ಭೂವರಾಹನು ಏನನ್ನೂ

ತೆಗೆದುಕೊಳ್ಳದೆ, ಗಂಭೀರವಾಗಿ ನಿಂತಿದ್ದುದನ್ನು ನೋಡಿ, ಸ್ವಾಮಿಗಳು—ಏಕೆ ಸುಮ್ಮನಿದ್ದೀಯೆ? ನೀನೂ ಬೇಕಾದುದನ್ನು ತೆಗೆದುಕೋ ಎಂದರಂತೆ! ಆಗಲಾಬಾಲಕನು—ಸ್ವಾಮಿ, ನನಗೆ ಇವುಗಳಲ್ಲೊಂದೂ ಬೇಡ, ನನಗೆ ಬೇಕಾದುದನ್ನು ವಿಜ್ಞಾಪಿಸುತ್ತೇನೆ; ಅನುಗ್ರಹಿಸಬೇಕು ಎಂಬುವಾಗಿ ನುಡಿದು—

† ಗುರುಭಕುತಿ ಬೇಕು| ಹಿರಿಯರ ಕರುಣ ಬೇಕು|
ಹರಿಕಥೆಗಳ ನಿತ್ಯ ಕೇಳುತಿರಬೇಕು||
ವಿರಕುತಿ ಬೇಕು| ವಿಷ್ಣುವಿನಾರಾಧನೆ ಬೇಕು|
ವರಮಂತ್ರಜಪ ಬೇಕು| ತಪಬೇಕು ಪರಗತಿಗೆ|
ಶಿರಿಹಯವದನನ ಪರಮಾನುಗ್ರಹ ಬೇಕು|
ವಿಷಯನಿಗ್ರಹ ಬೇಕು||

ಎಂಬ ತನ್ನ ಅಪೇಕ್ಷೆಯನ್ನು ಶ್ರೀಗಳವರಲ್ಲಿ ನಿವೇದಿಸಿದನಂತೆ! ಆಹಾ! ಈ ಶಿಷ್ಯೋತ್ತಮನ ಪ್ರಾರ್ಥನೆ ಆ ಗುರುಗಳಿಗೆ ಎಷ್ಟು ಹಿತವೆನ್ನಿಸಿರಬಹುದು!

ವ್ಯಾಸಂಗವು ಮುಂದರಿದಂತೆಲ್ಲಾ, ಗುರುಗಳು ಅವನ ವಿಷಯದಲ್ಲಿ ಹೆಚ್ಚು ಹೆಚ್ಚು ಸುಪ್ರೀತರಾಗುತ್ತ, ಶಾಸ್ತ್ರಚರ್ಚೆ, ವಾದಿನಿಗ್ರಹ, ವಿದ್ವತ್ ಸಭೆಗಳಲ್ಲಿ ಉಪನ್ಯಾಸಾದಿಗಳು ಮುಂತಾದುವಕ್ಕೆಲ್ಲ ಇವನನ್ನೇ ಮುಂದು ಮಾಡುತ್ತ ಬಂದರು.

ಆ ವೇಳೆಗೆ ಆತನ ಮಾತಾಪಿತೃಗಳ ಉದರದಲ್ಲಿ* ಮತ್ತೊಬ್ಬ ಮಗನು ಹುಟ್ಟಲು, ಶ್ರೀ ವಾಗೀಶರು ತಮ್ಮ ಶಿಷ್ಯೋತ್ತಮನಿಗೆ ಸನ್ಯಾಸಾಶ್ರಮವಿತ್ತು ವಾದಿರಾಜತೀರ್ಥರೆಂದು ನಾಮಾಂತರಗೊಳಿಸಿದರು.

ಆ ವೇಳೆಯಲ್ಲಿ ವಿಜಯನಗರದಲ್ಲಿ ಶ್ರೀ ವ್ಯಾಸರಾಯಸ್ವಾಮಿಗಳವರು ರಾಜಗುರುಗಳಾಗಿ ನೂರಾರು ಮಂದಿ ಶಿಷ್ಯರಿಗೆ ಶಾಸ್ತ್ರಾಭ್ಯಾಸ ಮಾಡಿಸುತ ಮಹಾಪ್ರಬಲರಾಗಿದ್ದರು. ಶ್ರೀ ವಾದಿರಾಜರು ತಮ್ಮ ಪ್ರೌಢಶಾಸ್ತ್ರಾಭ್ಯಾಸ

---

† ಶ್ರೀವೇಂಕಟೇಶದರ್ಶನ ಸುಳಾದಿ ೬ನೇ ತಾಳ —ಸಂ.

* ಕಲಕಾಲದ ಮೇಲೆ ಇವರೂ ಶ್ರೀ ಸುರೋತ್ತಮತೀರ್ಥರೆಂದು ಪ್ರಸಿದ್ಧರಾದರು. ಆಶ್ರಮ ಶ್ರೀ ವಾದಿರಾಜರಿಂದಲೇ. ಯುಕ್ತಿಮಲ್ಲಿಕಾ ವ್ಯಾಖ್ಯಾನಕರ್ತರು. —ಸಂ.

ಕ್ಕಾಗಿ ಅವರಲ್ಲಿಗೆ ಬಂದು, ಅವರ ಬಳಿ ವ್ಯಾಸಂಗ ಮಾಡುತ್ತಿದ್ದ ಇಪ್ಪತ್ನಾಲ್ಕು ಮಂದಿ ಸನ್ಯಾಸಿಗಳಲ್ಲಿ ಒಬ್ಬರಾಗಿ ನ್ಯಾಯಸುಧಾ, ನ್ಯಾಯಾಮೃತ, ತರ್ಕ-ತಾಂಡವ, ಚಂದ್ರಿಕಾ ಮುಂತಾದ ಪರಮಪ್ರೌಢಗ್ರಂಥಗಳನ್ನು ಅಭ್ಯಾಸ ಮಾಡಿದರು. ಅವರ ವಿದ್ವತ್ತೂ ಪ್ರೌಢಿಮೆಯೂ ಕರ್ಣಾಟಕಸಾರ್ವಭೌಮ ಕೃಷ್ಣದೇವರಾಯನನ್ನೂ ಬೆರಗುಗೊಳಿಸಿತು. ಆತನು ಶ್ರೀ ವಾದಿರಾಜರನ್ನು **ಪ್ರಸಂಗಾಭರಣತೀರ್ಥ**ರೆಂಬ ಬಿರುದಿನಿಂದ ಕರೆದು ಗೌರವಿಸಿದನು.

ಹೀಗೆ ವಿಜಯನಗರರಾಜಧಾನಿಯಲ್ಲಿ ಗೌರವ ಹೊಂದಿ ಉಡುಪಿಗೆ ಹಿಂದಿರುಗಿದ ಶ್ರೀ ವಾದಿರಾಜರು, ಶ್ರೀಕೃಷ್ಣಮಠದ ಪೂಜಾ ಆರಾಧನೆ ಮುಂತಾದುವುಗಳನ್ನು ಸುವ್ಯವಸ್ಥೆಗೊಳಿಸಿದರು. ಅಷ್ಟಮಠದ ಯತಿಗಳಲ್ಲಿ ಒಬ್ಬೊಬ್ಬರು ಎರಡೆರಡು ವರ್ಷಕಾಲ ಪೂಜಿಸುವ ಈಗಿನ ಪರ್ಯಾಯ ಪದ್ಧತಿಯನ್ನು ಶ್ರೀ ವಾದಿರಾಜರೇ ವ್ಯವಸ್ಥೆಗೊಳಿಸಿದರೆಂದು ಹೇಳಲ್ಪಟ್ಟಿದೆ.

ವಿಜಯನಗರದಲ್ಲಿ ಶ್ರೀ ವ್ಯಾಸರಾಯಸ್ವಾಮಿಗಳವರಲ್ಲಿದ್ದಾಗಿನಿಂದ, ಪಾಮರಜನತೆಯ ಉದ್ಧಾರಕ್ಕಾಗಿ ಕನ್ನಡಭಾಷೆಯಲ್ಲಿ ಪದಸುಳಾದಿಗಳನ್ನು ರಚಿಸುವ ಉತ್ಸಾಹವು ಶ್ರೀ ವಾದಿರಾಜರಲ್ಲಿ ಸಹಜವಾಗಿ ಬೆಳೆದುಬಂದಿತು. ಶ್ರೀ ಪುರಂದರದಾಸರೂ, ಶ್ರೀ ಕನಕದಾಸರೂ ಆಗ್ಗೆ ಶ್ರೀ ವ್ಯಾಸರಾಯ ಸ್ವಾಮಿಗಳವರ ಶಿಷ್ಯಕೋಟಿಯಲ್ಲಿ ಬೆರೆತಿದ್ದು, ಹರಿಭಜನೆ, ಕೀರ್ತನೆ, ಪದ ಸುಳಾದಿಗಳ ರಚನೆ ಇವುಗಳಲ್ಲಿ ನಿರತರಾಗಿದ್ದರು. ವೇದಶಾಸ್ತ್ರಗಳ ಸಕಲ ಅರ್ಥರಹಸ್ಯಗಳೂ ಕರತಲಾಮಲಕವಾಗಿದ್ದ ಈ ಮಹಾನುಭಾವರು ಅಂತಹ ಅಮೌಲ್ಯಸಂಗತಿಗಳು ಎಲ್ಲರಿಗೂ ತಿಳಿಯುವಂತೆ ತಿಳಿಗನ್ನಡ ಭಾಷೆಯಲ್ಲಿರಬೇಕಲ್ಲಾ, ಎಂದು ಅಪೇಕ್ಷಿಸಿ ಮಾಡಿದ ಈ ಪರಮೋಪಕಾರ ಕ್ಕಾಗಿ ಕನ್ನಡಜನತೆ ಈ ಮಹಾನುಭಾವರಿಗೆ ಎಷ್ಟು ಕೃತಜ್ಞರಾಗಿದ್ದರೂ ಸಾಲದಾಗಿದೆ. ಉಡುಪಿಮಠಗಳಲ್ಲಿ ರಾತ್ರಿ ಪೂಜಾನಂತರ ನಡೆಯುವ ಭಜನೆಯ ಕ್ರಮವು ಶ್ರೀ ವಾದಿರಾಜರವರ ಕಾಲದಿಂದೀಚೆಗೇ ಆಚರಣೆಗೆ ಬಂದಿತೆಂಬುದು ಸುಪ್ರಸಿದ್ಧವಾಗಿದೆ. ಸಾಯಂಕಾಲದ ಪೂಜಾನಂತರದಲ್ಲಿ "ಲಕ್ಷ್ಮಿನಾರಾಯಣ ಜಯ| ಲಕ್ಷ್ಮಿನಾರಾಯಣ" ಎಂಬೀ ಪದವನ್ನು ಉಡುಪಿಯ ಸಕಲ ಮಠಗಳವರೂ ಹೇಳುವುದನ್ನು ಭಕ್ತಜನರಲ್ಲಿ ಅನೇಕರು ನೋಡಿರಬಹುದು, ಕೇಳಿರಬಹುದು. ಅಲ್ಲದೆ ಮಧ್ಯಾಹ್ನದ ಪೂಜಾ

ಕಾಲದಲ್ಲೂ ಪ್ರಾಕೃತಪದಗಳಿಂದ ಭಜನೆಯು ಅಖಂಡವಾಗಿ ನಡೆದೇ ಇರುತ್ತದೆ.

ಶ್ರೀವಾದಿರಾಜರ ದೇವರನಾಮಗಳು ಮೃದುಮಧುರವಾದ ತಿಳಿಗನ್ನಡ ಪದಗಳಿಂದಲೂ ವಿವಿಧ ಅಪೂರ್ವ ರಾಗತಾಳಗಳಿಂದಲೂ ಕರ್ಣಾಪ್ಯಾಯನ ವಾಗಿರುತ್ತವೆ. ಅವರ 'ಧವಳಗಂಗೆಯ ಗಂಗಾಧರ ಮಹಲಿಂಗ' ಎಂಬ ಶ್ರೀ ಮಹಾರುದ್ರದೇವರ ಮೇಲಿನ ಕೀರ್ತನೆಯಲ್ಲಿ— ಶ್ರೀ ಶಂಕರನು ಮಾಧವನ ತೋರಿಸುವ ಗುರುವರ್ಯರಲ್ಲಿ ಉತ್ತಮೋತ್ತಮಪ್ರಭುವೆಂಬುದನು ತಿಳಿಸಿದ್ದಾರೆ. ಶ್ರೀಗುರುವರ್ಯ ರುದ್ರದೇವರು—ಅರ್ಚಿಸಿದವರ ಅಭೀಷ್ಟ ಪೂರ್ಣಮಾಡತಕ್ಕವನು, ದುಶ್ಚರಿತರನ್ನು ದೂರದಲ್ಲಿಡುವವನು, ಹೆಚ್ಚಿದ ಅಘರಾಶಿಗಳನ್ನು ಬೇಗನೆ ತರಿವವನು, ಮತ್ತು ನಮ್ಮ ಅಚ್ಯುತಗಲ್ಲದ ಅಸುರರ ಬಡಿವವನು ಎಂಬುದನ್ನು ನಿರೂಪಿಸುವಲ್ಲಿ–ಅಚ್ಯುತನಿಗೆ ಸಮ್ಮತ-ರಾದ ಪ್ರಹ್ಲಾದ ಬಲಿ ವಿಭೀಷಣ ಮುಂತಾದ ಅಸುರರಿಗೆ ರುದ್ರದೇವರಿಂದ ಭೀತಿಯಿಲ್ಲವೆಂಬುದನ್ನೂ ಸೂಚಿಸಿದ್ದಾರೆ. ಮಾರನನ್ನು ಗೆಲಿದ ಮನೋಹರ ಮೂರ್ತಿಯಾದ ನೀನು ಮುರಾರಿಯನ್ನು ತೋರಿಸೊ—ನಿನಗೆ ಶರಣಾರ್ತಿ ಎಂದು ಬೇಡಿಕೊಳ್ಳಿರೆಂದಿದ್ದಾರೆ. ಚೆನ್ನಪ್ರಸನ್ನನಾದ ಶ್ರೀಹಯವದನಸ್ವಾಮಿ ಯನ್ನು ತೈಲಧಾರೆಯಂತೆ ಎಂದರೆ ವಿಚ್ಛಿತ್ತಿಯಿಲ್ಲದೆ ನೆನೆವಂತೆ ಮಾಡಲು ಶ್ರೀ ರುದ್ರದೇವರ ಅನುಗ್ರಹವು ಅತ್ಯವಶ್ಯಕವೆಂಬುದನ್ನು ತೋರಿಸಿ, ನಾನು ಅನ್ಯರನ್ನು ನಂಬಿಲ್ಲ–ಇದುವರೆಗೆ ಕಳೆದಷ್ಟು ಕಾಲ ವ್ಯರ್ಥವಾಯಿತು —ಹೋಗಲಿ, ಇನ್ನಾದರೂ ಶ್ರೀಹರಿಯನ್ನು ತೋರಿಸೋ ಮುಕ್ಕಣ್ಣ ಎಂದು ಬೇಡಿಕೊಳ್ಳುವ ಕ್ರಮವನ್ನು ನಮಗೆ ಬೋಧಿಸಿದ್ದಾರೆ.

ಪ್ರಾಣದೇವರನ್ನೂ, ಶ್ರೀ ಮಧ್ವಮುನಿವರ್ಯರನ್ನೂ ಮನಸಾರೆ ಕೀರ್ತಿಸಿದ್ದಾರೆ. ಮಧ್ವಮತವು ಸಕಲ ಶಾಸ್ತ್ರಸಮ್ಮತವಾದುದೆಂಬುದನ್ನು ಶಪಥಪೂರ್ವಕ ಸ್ಥಾಪಿಸಲು ತೊಡಗಿ—"ವರಮಧ್ವಶಾಸ್ತ್ರವೇ ಸಕಲ ಶಾಸ್ತ್ರಧಿಕೆಂದು ಶಿರವರಿದು ಮುಂದಿರಿಸಲೋ, ಪರಮತಜಾಲಗಳು ವೇದವಿರುದ್ಧವೆಂದು (ಸ್ಥಾಪಿಸಲು) ಶರಧಿಯನು ನೆರೆದಾಟಲೋ| ಭಾಗವತ ಶಾಸ್ತ್ರವೇ ಬಹುಭಾಗ್ಯವಂತೆಂದು ಭಾರ ಶಿರದಲಿ ವಹಿಸಲೋ| ಭಾಗವತ ನಿಂದಕಗೆ ಬಹುನರಕವೆಂತೆಂದು ಪರ್ವತಾಗ್ರದಿ ಧುಮುಕಲೋ|

ಪರಲೋಕಸಾಧನೆಗೆ ತಾರತಮ್ಯಮತವೆಂದು ಕ್ರೂರವಿಷವನು ಕುಡಿಯಲೋ| ಹರಿದಿನಕೆ ಮರು (ಬೇರೆ) ದಿನವು ಸರಿಯಿಲ್ಲವೆಂತೆಂದು ಹರಿವ ಹಾವನು ಹಿಡಿಯಲೋ|| ವಿದಿತದೈವಗಳೊಳಗೆ ವಿಷ್ಣು ಉತ್ತಮನೆಂದ ವೇದಗಳ ವಡನುಡಿಸಲೋ|| ಗುರುಮಧ್ವರಾಯರೇ ಆತ್ಮರಕ್ಷಕರೆಂದು ಅನಲ ಕೈಯಲಿ ಹಿಡಿಯಲೋ—ಶಿರಿಹಯವದನನು ಅಮಿತಗುಣಪೂರ್ಣನೆಂದು ಅಶರೀರವನು ನುಡಿಸಲೋ||" ಆದುದರಿಂದ ಇನ್ನು ಸಂಶಯವ್ಯಾಕೆ —ಅನುದಿನವು ಶ್ರವಣಮನನಾದಿ ಸಾಧನ ಮಾಡಿರಿ. ಈ ಮಧ್ವಮತವು ಜ್ಞಾನಿಗಳಿಗೆ ಸಮ್ಮತವಾದುದು ಎಂದು ಸ್ಥಾಪಿಸಿದ್ದಾರೆ.

ಒಮ್ಮೆ ಶ್ರೀ ವಾದಿರಾಜಗುರುವರ್ಯರು ತಿರುಪತಿಯಾತ್ರೆಗೆ ಹೊರಟು ಬೆಟ್ಟ ಹತ್ತಲು ಪ್ರಾರಂಭಿಸಿದಾಗ, ಆ ಮಹಾನುಭಾವರ ದೃಷ್ಟಿಗೆ ಪರ್ವತವೆಲ್ಲವೂ ಸಾಲಿಗ್ರಾಮಮಯವಾಗಿ ಕಾಣಬರಲು, ಪಾದಸ್ಪರ್ಶಮಾಡಲು ಮನವೊಪ್ಪದೆ ಮೊಳಕಾಲುಗಳಿಂದಲೇ ಕೆಳಗಿನಿಂದ ಮೇಲಿನವರೆಗೂ ನಡೆದುಕೊಂಡು ಹೋಗಿ ಅಲ್ಲಿ ಸ್ವಾಮಿಸಂದರ್ಶನ ಮಾಡಿದರಂತೆ! ಆ ಕಾಲದಲ್ಲಿ 'ಸಾರಿದೆನೋ ನಿನ್ನ, ವೇಂಕಟರನ್ನ' ಎಂಬೀ ಪದವನ್ನು ರಚಿಸಿ ಪಾಡಿದರೆಂದು ಹೇಳುತ್ತಾರೆ.

ಲೋಕದಲ್ಲಿ ಹಣವೇ ಪ್ರಧಾನವಸ್ತು. ಅದರಿಂದಲೇ ಜಗತ್ತಿನ ಸಕಲ ಅರ್ಥ-ಅನರ್ಥಾದಿ ವ್ಯಾಪಾರಗಳೂ ನಡೆಯುವುವು ಎಂಬುದನ್ನು 'ಹಣವೇ ನಿನ್ನಯ ಗುಣವೆನಿತು ಬಣ್ಣಿಪೆನಯ್ಯ' ಎಂಬ ಈ ಸುಂದರ ಪದದಿಂದ ಎಷ್ಟು ಸಮಂಜಸವಾಗಿ ನಿರೂಪಿಸಿದ್ದಾರೆ!

ಹಣವಿಲ್ಲದವನೊಬ್ಬ ಹೆಣಕಿಂತ ಕಡೆಯಯ್ಯ

ಬೆಲೆಯಾಗದನೆಲ್ಲ ಬೆಲೆಯ ಮಾಡಿಸುವಿ
ಎಲ್ಲ ವಸ್ತುಗಳನಿದ್ದಲ್ಲೇ ತರಿಸುವಿ
ಕುಲಗೆಟ್ಟವರ ಸತ್ಕುಲಕೆ ಸೇರಿಸುವಿ
ಹೊಲೆಯನಾದರು ತಂದು ಒಳಗೆ ನಿಲ್ಲಿಸುವಿ

ಅಂಗನೆಯರ ಸಂಗವ ಮಾಡಿಸುವಿ
ಶೃಂಗಾರಾಭರಣಂಗಳ ತರಿಸುವಿ

ಮಂಗನಾದರು ಅನಂಗನೆಂದೆನಿಸುವಿ
ಕಂಗಳಿಲ್ಲದವಂಗೆ ಮಗಳ ಕೊಡಿಸುವಿ

ಹರಣಕ್ಕೆ ಬಂದೆಂಥ ದುರಿತವ ಬಿಡಿಸುವಿ
ಸರುವರಿಗೆ ಶ್ರೇಷ್ಠನರನೆನ್ನಿಸುವಿ
ಅರಿಯದ ಶುಂಠನ ಅರಿತವನೆನಿಸುವಿ

ಮಾತ್ರವಲ್ಲ—ಎಲ್ಲಕ್ಕಿಂತ ಹೆಚ್ಚಾಗಿ ಅದರಿಂದ ಆಗುವ ಅನರ್ಥವೆಂದರೆ—

ಸಿರಿಹಯವದನನ ಸ್ಮರಣೆ ಮರೆಯಿಸುವಿ

ಎಂದು ನುಡಿದು ಪರಗತಿಯನ್ನಪೇಕ್ಷಿಸುವ ಮನುಜನು, ಹಣದ ಸಂಬಂಧವನ್ನಿಟ್ಟುಕೊಳ್ಳುವ ವಿಷಯದಲ್ಲಿ ಎಷ್ಟು ಜಾಗರೂಕನಾಗಿರಬೇಕು ಎಂಬುದನ್ನು ಸೂಚಿಸಿದ್ದಾರೆ.

ಈ ಹಣದಿಂದ ಲೌಕಿಕವಾಗಿ ಒದಗುವ ಅರ್ಥ ಮತ್ತು ಅನರ್ಥ ಪರಂಪರೆಯನ್ನು ವರ್ಣಿಸಿ, ಸಾಧಕನಾದ ಮನುಷ್ಯನಿಗೆ ಲೇಶಮಾತ್ರವೂ ಉಪಯುಕ್ತವಾಗಲಾರದ ಧನವು ಕೈಸೇರಿ ಹೇಗೆ ಅನರ್ಥವನ್ನುಂಟುಮಾಡಿದೆ ಎಂಬುದನ್ನು ವಿವರಿಸುವ 'ಸಕಲಸಾಧನವೆನಗೆ ಕೈಸೇರಿತು' ಎಂಬೀ ಪದವನ್ನು ನುಡಿದಿದ್ದಾರೆ. ಇದರಲ್ಲಿ ಪರಗತಿಸಾಧನೆಗೆ ಭಗವತ್ಪಾದದಲ್ಲಿ ಜ್ಞಾನಭಕ್ತಿವೈರಾಗ್ಯಗಳು ಆವಶ್ಯಕ. ಆದರೆ ನನಗೆ **ಸಂಸಾರದಲಿ ಜ್ಞಾನ, ಸತಿಸುತರಲಿ ಭಕ್ತಿ**, ಕಂಸಾರಿ **ಪೂಜೆಯಲಿ ವೈರಾಗ್ಯ** ಇವು ಲಭ್ಯವಾಗಿವೆ ಎನ್ನುತ್ತಾರೆ. ಅಷ್ಟುಮಾತ್ರವಲ್ಲ; ವಿಷಯಂಗಳಲಿ **ಧ್ಯಾನ**, ಲೌಕಿಕದಲಿ **ಮನವು**, ವಸುಧೆ ದುರ್ಜನರ ಕಥೆ ಕೇಳುವುದೆ **ಶ್ರವಣ**, ಹಸನಾಗಿ ಎಣಿಸುವ ಹೊನ್ನಿನ **ಜಪವು**, ಬಿಸಿಲೊಳಗೆ ಸಂಚರಿಸುವುದೆ **ಮಹಾತಪವು**, ಇನ್ನೂ ಕೇಳಿ: ಮಾಟದ ಪಯೋಧರವೇ **ಕಲಶಪೂಜೆ**, ಉದರದ ಯಾತ್ರೆಯೇ **ಮಹಾಯಾತ್ರೆ**, ಬೂಟಕತನದಲ್ಲಿ ಅನೃತಪೇಳ್ವುದೆ **ಮಂತ್ರ**, ಹೆಂಡತಿಯ ಕೊಂಡೆಯಮಾತುಗಳೆ **ಉಪದೇಶ**, ಚಂಡಕೋಪವೆಂಬೋದೆ **ಅಗ್ನಿಹೋತ್ರ**.—ಓದುವುದೆ ಎಲ್ಲಣ್ಣ ಕಲ್ಲಣ್ಣನೆಂಬುವುದು—ಈಪರಿಯ ಧನವನ್ನು ಸಾಧಿಸಿ, ಹಯವದನಸ್ವಾಮಿ ನಾ ನಿನ್ನ ಮರೆತೆ—ಈಪರಿಯಲ್ಲಿ ಮುಕುತಿಯ ಸಾಧನಕೆ ತುಸವೂ ಉಪಯೋಗ ಬಾರದ ಈ ಧನವು ಕೈಸೇರಿ

ಸಂಸಾರಬಂಧನದಲ್ಲಿ ಸಿಲುಕಿರಲು ನನಗೆ ಸಕಲ ಸಾಧನವೂ ಆದಂತಾಯಿತು ಎಂದು ವಿವರಿಸಿದ್ದಾರೆ.

ಹೀಗೆಯೇ ಆ ಮಹಾನುಭಾವರು ಸಕಲ ಶಾಸ್ತ್ರಾರ್ಥಸಾರಭೂತವೂ, ಲೌಕಿಕ ನಡವಳಿಕೆಯಲ್ಲಿ ಪರಮಹಿತಸಾಧಕವೂ ಆದಂಥ ಅಮೌಲ್ಯವಾದ ಬೋಧನೆಗಳನ್ನು ತಮ್ಮ ದೇವರನಾಮಗಳಲ್ಲಿ ವಿವರಿಸಿದ್ದಾರೆ. ಸ್ವಪ್ನಪದ ಎಂಬ ನಾಲ್ವತ್ತೈದು ಭಾಮಿನೀಷಟ್ಪದಿ ಪದ್ಯಗಳಲ್ಲಿ—ಶ್ರೀ ಮಧ್ವಮತದ ಅತಿಮುಖ್ಯತತ್ವಗಳಾದ ಜಗತ್ಸತ್ಯತ್ವ, ಪಂಚಭೇದ ತಾರತಮ್ಯಾದಿಗಳು, ಶ್ರೀಹರಿಯ ಸರ್ವೋತ್ತಮತ್ವ, ಸರ್ವಕಲ್ಯಾಣಗುಣಪೂರ್ಣತ್ವ, ನಿರ್ದೋಷತ್ವ ಮುಂತಾದುವುಗಳನ್ನೆಲ್ಲ ವರ್ಣಿಸುತ್ತ, ಬಹು ಚಮತ್ಕಾರ ರೀತಿಯಲ್ಲಿ—

ಎಲ್ಲವಿಲ್ಲೆಂಬುವಗೆ ನುಡಿವುದ-
ಕಿಲ್ಲ ನಾಲಿಗೆ ಕೇಳ್ವ ಕರ್ಣಗ-
ಳಿಲ್ಲ ಪೇಳ್ವಾಚಾರ್ಯರಿಲ್ಲ ವಿವೇಕವಿಲ್ಲವೆಲೆ

ಎಂದು ನಿರಾಕರಿಸಿ—ಎನ್ನ ಗುಣಗಳ ಪೊಗಳುತಿರು ಪೂರ್ಣಪ್ರಜ್ಞರಮತವೆ ಸುಮತ" ಎಂಬ ಶ್ರೀಹರಿಯ ಅಭಿಪ್ರಾಯವನ್ನು ಉಲ್ಲೇಖಿಸಿ—'ಅನ್ಯ ಮತಗಳ ಜರಿದು ಈ ಸಂ| ಪನ್ನ ಮರುತನ ಮತವ ಮನದಲಿ| ಮನ್ನಿಸುತ ಮನನವನು ಮಾಳ್ಪರನಿನ್ನು ಸಲಹುವೆನು||' ಎಂಬ ಆ ಸರ್ವೋತ್ತಮನಿತ್ತ ಭರವಸೆಯನ್ನು ಭಕ್ತರಉದ್ಧಾರಕ್ಕಾಗಿ ಸ್ಪಷ್ಟವಾಣಿಗಳಿಂದ ನಿರೂಪಿಸಿದ್ದಾರೆ.

ಅವರಿಂದ ರಚಿತವಾದ 'ಶ್ರೀಹರಿಸರ್ವೋತ್ತಮಸಾರ' ಎಂಬ ಕವಿತೆಯೂ ಮನೋಜ್ಞವಾಗಿದೆ. ಶ್ರೀ ವಾದಿರಾಜರು 'ವೈಕುಂಠವರ್ಣನೆ' ಎಂಬ ಹೆಸರಿನಿಂದ 'ಶ್ರುತಿಪುರಾಣಗಳ ಮೊತ್ತವನು ನೆರೆಮಥಿಸಿ ಮೋಲಣ ಮುಕ್ತಿಸೃಷ್ಟಿಸ್ಥಿತಿಲಯಂಗಳ ಅರ್ಥಿಯಲಿ ಬಣ್ಣಿಸುವ ಕಥೆ'ಯನ್ನು ಬಹು ಸುಂದರವಾದ ಕವಿತಾರೂಪದಲ್ಲಿ ರಚಿಸಿದ್ದಾರೆ. ಇವುಗಳಲ್ಲದೆ ಈ ಮಹಾನುಭಾವರು, ತಮ್ಮ ತಾಯ್ನುಡಿಯಾದ ತುಳು ಭಾಷೆಯಲ್ಲೂ ಭಗವದ್ಭಕ್ತಿಸಾಧಕವಾದ ಹಲವು ಕವಿತೆಗಳನ್ನು ರಚಿಸಿದ್ದಾರೆಂದು ಹೇಳಿಕೆ ಉಂಟು.

ಸಂಸ್ಕೃತಭಾಷೆಯಲ್ಲಿ ಇವರು ತತ್ತ್ವಪ್ರಕಾಶಿಕಾಟಿಪ್ಪಣಿ, ಭಗವದ್ಗೀತಾ

ಟಿಪ್ಪಣಿ, ಮಹಾಭಾರತಟಿಪ್ಪಣಿ, ಮಹಾಭಾರತ ತಾತ್ಪರ್ಯನಿರ್ಣಯಟೀಕಾ, ತಂತ್ರಸಾರಟೀಕಾ, ಪ್ರಮೇಯಸಂಗ್ರಹ, ಯುಕ್ತಿಮಲ್ಲಿಕಾ, ರುಕ್ಮಿಣೀಶ ವಿಜಯ, ಸರಸಭಾರತೀವಿಲಾಸ, ತೀರ್ಥಪ್ರಬಂಧ, ಪಾಷಂಡಮತಖಂಡನ, ಏಕಾದಶೀನಿರ್ಣಯ ಮುಂತಾದ ಅನೇಕ ಗ್ರಂಥಗಳನ್ನು ರಚಿಸಿ ಅಜರಾಮರ ಕೀರ್ತಿಭಾಜನರಾಗಿದ್ದಾರೆ.

ವಾದಿನಿಗ್ರಹ, ಗ್ರಂಥರಚನೆ, ಭಗವದಾರಾಧನೆ ಮುಂತಾದ ಕಾರ್ಯಗಳೊಂದಿಗೆ ಶ್ರೀ ವಾದಿರಾಜರು ಸಂದರ್ಭಾನುಸಾರ ಅನೇಕ ಅಮಾನುಷಸಾಮರ್ಥ್ಯಗಳನ್ನು ಪ್ರಕಟಿಸಿಯೂ ಜನರಲ್ಲಿ ಜ್ಞಾನಭಕ್ತಿಗಳನು ವೃದ್ಧಿಗೊಳಿಸಿದ್ದಾರೆ.

ಇವರಿಂದ ವಾದದಲ್ಲಿ ಪರಾಜಿತನಾದ ಒಬ್ಬ ಬ್ರಹ್ಮರಾಕ್ಷಸನ್ನು ಶ್ರೀ ಸ್ವಾಮಿಗಳವರ ಪಾಲಕಿಯನ್ನು ಹೊರಲು ಒಪ್ಪಿದನಂತೆ! ಒಂದು ಕಡೆ ಮಾತ್ರ ಬೋಯಿಗಳಿದ್ದು, ಮತ್ತೊಂದುಕಡೆ ಅದೃಶ್ಯನಾದ ಈ ಭೂತನಿಂದ ಹೊರಲ್ಪಟ್ಟು ಸಾಗುತ್ತಿದ್ದ ಪಾಲಕಿಯು ನೋಡುವವರಿಗೆ ಅತಿಶಯ ಕೌತುಕವನ್ನೂ, ಶ್ರೀ ಶ್ರೀಗಳವರ ಅಗಾಧಮಹಿಮೆಯನೂ ವ್ಯಕ್ತಗೊಳಿಸುವಂತಿತ್ತು. ಇದಲ್ಲದೆ ಪಾದಷಹನ ಮೃತಪುತ್ರನನ್ನು ಬದುಕಿಸಿದುದು, ಹಾವಿನ ಭಯದಿಂದ ತಮ್ಮ ಪೀಠದ ಕೆಳಕ್ಕೆ ಬಂದು ಮರೆಹೊಕ್ಕ ಇಲಿಯನ್ನು ರಕ್ಷಿಸಿ ಅವೆರಡಕ್ಕೂ ಸ್ನೇಹವನ್ನು ಕಲ್ಪಿಸಿದುದು, ತಮ್ಮ ಚತುಷ್ಷಷ್ಟಿ ಕಲಾಭಿಜ್ಞತೆಯನ್ನು ಪ್ರಕಟಿಸಿದುದು ಮುಂತಾದ ಅಗಾಧ ಮಹಿಮೆಗಳು ಪಂಡಿತಪಾಮರರೆಲ್ಲರಿಗೂ ಶ್ರೀ ವಾದಿರಾಜರಲ್ಲಿ ಪೂಜ್ಯತೆಯನ್ನು ಗಳಿಸಿಕೊಡಲು ಸಾಧಕವಾಗಿವೆ.

ಶ್ರೀ ವಾದಿರಾಜಶ್ರೀಪಾದಂಗಳವರ ಆರಾಧ್ಯಮೂರ್ತಿಯಾದಂತಹ ಶ್ರೀ ಹಯವದನಸ್ವಾಮಿಯು, ದಿವ್ಯಾಶ್ವರೂಪದಿಂದಲೇ ಅವರಿಗೆ ದರ್ಶನ ಇತ್ತು ಅನುಗ್ರಹಿಸಿದ್ದನು. ವಾದಿರಾಜರ ಯಶಸ್ಸನ್ನೂ ವಿದ್ಯಾಪಾಂಡಿತ್ಯ ಮುಂತಾದುವನ್ನು ಸಹಿಸದ ಅಸೂಯಾಪರರು ಒಮ್ಮೆ ಆ ಮಹಾನುಭಾವರಿಗೆ ವಿಷಪ್ರಯೋಗ ಮಾಡಿಸಲು ನೈವೇದ್ಯಕ್ಕಾಗಿ ಮಾಡಿಸಿಟ್ಟಿದ್ದ ಹಯಗ್ರೀವ ವೆಂಬ ಭಕ್ಷ್ಯವಿಶೇಷದಲ್ಲಿ ವಿಷ ಬೆರೆಸಿದ್ದರಂತೆ! ಅದನ್ನು ನೈವೇದ್ಯಕ್ಕಿಟ್ಟಾಗ್ಗೆ ಶ್ರೀ ಹಯವದನಸ್ವಾಮಿಯೇ ದಿವ್ಯಾಶ್ವರೂಪದಿಂದ ಎಲ್ಲವನ್ನೂ ಭಕ್ಷಿಸಿ, ಅವರಿಗೆ ವಿಷಬಾಧೆ ತಟ್ಟದಂತೆ ರಕ್ಷಿಸಿದನೆಂದು ಹೇಳಲ್ಪಟ್ಟಿದೆ.

ಸೋದೆಯಲ್ಲಿ ಶ್ರೀ ಶ್ರೀಗಳವರ ಪ್ರೀತಿಗೆ ಪಾತ್ರನಾಗಿದ್ದ ಅರಸಪ್ಪ ನಾಯಕನ ಅಳಿಯನು ಒಮ್ಮೆ ಜ್ವರಪೀಡಿತನಾಗಿ ಮೃತನಾಗಲು ಶ್ರೀ ವಾದಿರಾಜರು 'ಲಕ್ಷ್ಮೀಶೋಭಾನೆ ಹಾಡು' ಎಂಬ ನೂರೆಂಟು ನುಡಿಗಳ ಒಂದು ಪದವನ್ನು ರಚಿಸಿ ಹಾಡಿ ಆತನನ್ನು ಬದುಕಿಸಿ ಆ ವಧೂವರರನ್ನು ಆಶೀರ್ವದಿಸಿದರು. ಈ ಮಹಿಮೆಗೆ ಅತ್ಯಂತ ಕೃತಜ್ಞನಾದ ರಾಜನು ಶ್ರೀ ವಾದಿರಾಜರ ಇಚ್ಛಾನುಸಾರ ದೇವಸ್ಥಾನಗಳು, ತಟಾಕಆರಾಮಾದಿಗಳು ಇವುಗಳನ್ನೆಲ್ಲ ಕಟ್ಟಿಸಿ ಅವರ ಅನುಗ್ರಹವನ್ನು ಪಡೆದನು. ಶ್ರೀಗಳವರು ತಮ್ಮ ಕಿಂಕರನಾದ ನಾರಾಯಣಭೂತನಿಂದ ಬದರಿಕಾಶ್ರಮದಲ್ಲಿದ್ದಂಥ ತ್ರಿವಿಕ್ರಮಮೂರ್ತಿಯ ಶಿಲಾರಥವನ್ನು ತರಿಸಿ ಮಹಾವೈಭವದಿಂದ ಅದರ ಪ್ರತಿಷ್ಠಾಕಾರ್ಯವನ್ನು ನಡೆಯಿಸಿದರು.

ಹೀಗೆ ಅಗಾಧ ಮಹಿಮೆಗಳನ್ನು ಪ್ರಕಟಿಸಿದ ಶ್ರೀ ವಾದಿರಾಜ ಶ್ರೀಪಾದಂಗಳವರು, ತಮ್ಮನ್ನು ಗರ್ಭದಲ್ಲಿ ಧರಿಸಿದ್ದಾಗ್ಗೆ ಸ್ವಾಮಿಗೆ ಸುಪುತ್ರಸಂತಾನವನ್ನು ಕರುಣಿಸುವಂತೆ ಪ್ರಾರ್ಥಿಸಿ, ಲಕ್ಷಾಭರಣವನ್ನು ಸಮರ್ಪಿಸುವುದಾಗಿ ಸಂಕಲ್ಪಿಸಿಕೊಂಡಿದ್ದ ಸಾಧ್ವೀಮಣಿಯಾದ ತಮ್ಮ ತಾಯಿಗೆ— "ಶ್ರೀ ವೇದವ್ಯಾಸರ ಆಜ್ಞೆಯಿಂದ ಶ್ರೀಮನ್ಮಹಾಭಾರತಕ್ಕೆ ಲಕ್ಷಾಭರಣವೆಂಬ ಟೀಕೆಯನ್ನು ಬರೆದು ನಿನ್ನ ಸಂಕಲ್ಪವನ್ನು ಸಲ್ಲಿಸಿದ್ದೇನೆ" —ಎಂದು ಹೇಳಿ ತೃಪ್ತಿಪಡಿಸಿದರು.

ಹೀಗೆ ಒಂದುನೂರಇಪ್ಪತ್ತು ವರ್ಷಕಾಲ ದೇಹಧಾರಿಗಳಾಗಿದ್ದು ಅತಿಮಾನುಷಕಾರ್ಯಗಳೆನ್ನಿಸಿಕೊಳ್ಳಬಹುದಾದ ಅಗಾಧ ಕಾರ್ಯಕಲಾಪಗಳನ್ನು ನಡೆಯಿಸಿ, ಸ್ವಯಂ ಬೃಂದಾವನಪ್ರವೇಶಮಾಡಿ ಇಂದಿಗೂ ಸೋದೇಕ್ಷೇತ್ರದಲ್ಲಿ ಭಕ್ತಕಲ್ಪದ್ರುಮರೆಂದು ಆರಾಧಿಸಲ್ಪಡುತ್ತಿದ್ದಾರೆ.

ಕಾಮಧೇನುರ್ಯಥಾ ಪೂರ್ವಂ ಸರ್ವಾಭೀಷ್ಟಫಲಪ್ರದಾ
ತಥಾ ಕಲೌವಾದಿರಾಜಃ ಶ್ರೀಪಾದೋಽಭೀಷ್ಟದಃ ಸತಾಂ

ಮಹಾನುಭಾವರಾದ ಶ್ರೀ ವಾದಿರಾಜಗುರುವರ್ಯರ ಈ ಸಂಕ್ಷಿಪ್ತ ಪರಿಚಯವು, ಅವರ ಅಗಾಧ ಚರಿತ್ರಪಠನ, ಅತ್ಯಗಾಧ ಗ್ರಂಥಾವಲೋಕನ -ಪಾದಸೇವನ ಮುಂತಾದುವುಗಳಿಗೆ ಭಕ್ತಜನರ ಮನಸ್ಸನ್ನು ಪ್ರೇರಿಸಲು ಲೇಶಮಾತ್ರಸೂಚಕವಾಗಿ, ತನ್ಮೂಲಕ ಸಜ್ಜನರ ಹೃದಯಾಂತರ್ಯಾಮಿಯಾದ ಶ್ರೀಹರಿಯು ಸಂತುಷ್ಟನಾಗಲಿ.

★

ವೇದವೂ ಗುರುಭಕ್ತಿಯೂ

ಲೇಖಕರು:
ಆಸ್ಥಾನ ಮಹಾವಿದ್ವಾನ್, ವೈದಿಕವಿದ್ಯಾವಿಶಾರದ, ವೈದಿಕಭೂಷಣ
ಸಲಕ್ಷಣ ಘನಾಂತ ವಿದ್ವಾನ್, ದ್ವೈತವೇದಾಂತ ವಿದ್ವಾನ್
ವೇ|| ಘನಪಾಠಿ ಮಧ್ವರಾಯಾಚಾರ್ಯರು,
ಪ್ರಧಾನಾಧ್ಯಾಪಕರು,
ಶ್ರೀ ಚಾಮರಾಜೇಂದ್ರ ವೇದಮಹಾಪಾಠಶಾಲಾ, ಬೆಂಗಳೂರು.

(ಈ ಲೇಖನವು ಮೊದಲ ಬಾರಿ ನೋಡುವಾಗ ಸಾಮಾನ್ಯರಿಗೆ ಕಠಿಣವಾಗಿ ತೋರಿದರೂ ವಿಷಯ ಬಹು ಮುಖ್ಯವಾದ್ದರಿಂದಲೂ, ಧರ್ಮರಕ್ಷಣೆಗೆ ಬಹು ಅವಶ್ಯಕವಾದ್ದರಿಂದಲೂ ಪುನಃಪುನಃ ಓದಿ ಮನನಮಾಡಲು ಬಿನ್ನವಿಸುತ್ತೇವೆ.
—ಸಂ.)

ಸಕಲ ವೇದಗಳಿಂದ ಪ್ರತಿಪಾದ್ಯನಾದ ಶ್ರೀಪರಮಾತ್ಮನು ಅನಾದಿಯಾದ ಜೀವರುಗಳ ಕರ್ಮಾನುಸಾರವಾಗಿ ಬ್ರಾಹ್ಮಣಾದಿ ಜಾತಿಗಳಲ್ಲಿ ಜೀವರುಗಳನ್ನು ಜನಿಸುವ ಹಾಗೆ ಮಾಡುತ್ತಾನೆ ಎಂದು "ಮೃತ್ವಾಪುನರ್ಮೃತ್ಯು ಮಾಪದ್ಯಂತೇ ಅದ್ಯಮಾನಾಃ ಸ್ವಕರ್ಮಭಿಃ" ಎಂಬುವ ಈ ಶ್ರುತಿ-ವಾಕ್ಯದಿಂದ ಪ್ರಮಿತವಾಗಿದೆ. ಮತ್ತು ಬ್ರಾಹ್ಮಣಜಾತಿಯಲ್ಲಿ ಉತ್ಪನ್ನರಾದ ಜೀವರುಗಳು ಉತ್ಪತ್ತಿಯಿಂದಲೇ ಬ್ರಾಹ್ಮಣರೆಂದೂ ಶ್ರುತವಾಗಿದೆ. (ಜಾಯಮಾನೋ ವೈ ಬ್ರಾಹ್ಮಣಃ ತ್ರಿಭಿರ್‌ರುಣವಾ ಜಾಯತೇ ಬ್ರಹ್ಮಚರ್ಯೇಣರ್ಷಿಭ್ಯೋ ಯಜ್ಞೇನ ದೈವೇಭ್ಯಃ ಪ್ರಜಯಾ ಪಿತೃಭ್ಯಃ ಇತಿ||) ಎಂಬುದಾಗಿ ಶ್ರುತವಾಗಿದೆ. ಇದರಿಂದ ಋಷಿಗಳಿಗೂ, ದೇವತೆಗಳಿಗೂ, ಪಿತೃಗಳಿಗೂ, ಋಣಿಯಾಗಿರುತ್ತಾನೆಂಬುದು ವಿದಿತವಾಯಿತು. ಈ ಮೊದಲನೆಯದಾದ ಋಷಿಋಣವನ್ನು ಪರಿಹಾರಮಾಡಿಕೊಳ್ಳಬೇಕಾದರೆ ಉಪನಯನಸಂಸ್ಕಾರದಿಂದ ಸಂಸ್ಕೃತನಾಗಿ ಗುರುಕುಲದಲ್ಲಿ ಹನ್ನೆರಡು ವರ್ಷ ಬ್ರಹ್ಮಚರ್ಯನಿಯಮದಿಂದ ವೇದಾಧ್ಯಯನವನ್ನು ಮಾಡಿ ಅವರಿಗೆ ಪ್ರಿಯವಾದ ಗುರುದಕ್ಷಿಣಾಪ್ರದಾನಮಾಡಿ ಅವರಿಂದ ಆಜ್ಞಪ್ತನಾಗಿ

ಗೃಹಸ್ಥಾಶ್ರಮವನ್ನು ಸ್ವೀಕರಿಸಬೇಕು. 'ಆಚಾರ್ಯಾಯ ಪ್ರಿಯಂ ಧನಮಾಹೃತ್ಯ ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ' ಎಂಬುವದಾಗಿ ಉಕ್ತವಾಗಿದೆ. ಆದ್ದರಿಂದಲೇ 'ವೇದವನೋದದ ವಿಪ್ರ ತಾನ್ಯಾತಕೆ?' ಎಂದರು ಶ್ರೀ ದಾಸರಾಯರು.

ವೇದವು ಶ್ರೀ ಪರಮಾತ್ಮನ ಆಜ್ಞಾರೂಪವಾದದ್ದು. ಅವನೇ ಸರ್ವತಂತ್ರಸ್ವತಂತ್ರನು. ಅವನ ಆಜ್ಞಾಪರಿಪಾಲನೆಯು ಅವಶ್ಯಕರ್ತವ್ಯ ಎಂದು ತಿಳಿದು ವೇದೋಕ್ತ ಕರ್ಮಾನುಷ್ಠಾನಗಳನ್ನು ಮಾಡಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಎಂಬ ಈ ಆರು ಮನಸ್ಸಂಬಂಧವಾದ ಕಶ್ಮಲಗಳನ್ನು ನಿವಾರಣೆ ಮಾಡಿಕೊಂಡು ಜ್ಞಾನ-ದ್ವಾರಾ ಮೋಕ್ಷಾಖ್ಯ ಪುರುಷಾರ್ಥವನ್ನು ಹೊಂದಬೇಕು. ಇಂತಹ ಪುರುಷಾರ್ಥವನ್ನು ಹೊಂದಲು ಅಧಿಕಾರಿಯು ವೇದಾಧ್ಯಯನ ಮಾಡಿರುವವನೇ ಆಗುತ್ತಾನೆ. ಬ್ರಹ್ಮಸೂತ್ರದಲ್ಲಿ 'ಓಂ ಓಂ ಅಥಾತೋ ಬ್ರಹ್ಮ-ಜಿಜ್ಞಾಸಾ ಓಂ' ಈ ಸೂತ್ರದಲ್ಲಿರತಕ್ಕ 'ಅಥ' ಶಬ್ದದ ವ್ಯಾಖ್ಯಾನದಲ್ಲಿ ಭಾಷ್ಯಕಾರರಾದ ಶ್ರೀಮನ್ಮಧ್ವಾಚಾರ್ಯರು ಇದನ್ನು ವ್ಯಕ್ತಪಡಿಸಿರುತ್ತಾರೆ. "ಅಧ್ಯಯನಮಾತ್ರವತಃ ನಾವಿಶೇಷಾತ್" ಎಂಬುದಾಗಿ ಬಾದರಾಯಣರು ಹೇಳಿರುತ್ತಾರೆ. ಆದಕಾರಣ ಅಧಿಕಾರಿಗಳಾದ ನಾವುಗಳು ಅಧ್ಯಯನ ಮಾಡಿ ಪರಮಾತ್ಮನ ಅಪಾರ ಮಹಿಮಾತಿಶಯಗಳನ್ನು ವೇದವಾಕ್ಯಗಳಿಂದ ತಿಳಿದು ಅವನಲ್ಲಿ ಭಕ್ತಿಯಿಟ್ಟು ಅಪರೋಕ್ಷಜ್ಞಾನವನ್ನು ಸಂಪಾದಿಸಬೇಕು. ಇದಕ್ಕಾಗಿಯೇ ಗುರುಸಾನ್ನಿಧ್ಯದಲ್ಲಿದ್ದುಕೊಂಡು ಅವರಿಂದುಪದೇಶಿಸಲ್ಪಟ್ಟ ವೇದಗಳನ್ನು ಚೆನ್ನಾಗಿ ಧಾರಣೆಮಾಡಿಕೊಂಡು ಮಂತ್ರಸಿದ್ಧಿಯನ್ನು ಪಡೆಯಬೇಕು. ಈ ವಿಚಾರದಲ್ಲಿ ವೇದದಲ್ಲೇ ಒಂದು ಕಥಾ ಸ್ಪಷ್ಟವಾಗಿದೆ. ಅದು ಯಾವುದೆಂದರೆ—ನೃಮೇಧ, ಪರುಚ್ಛೇಪ ಎಂಬಿಬ್ಬರು ಒಬ್ಬ ಗುರುಗಳಲ್ಲಿ ಅಧ್ಯಯನ ಮಾಡಿ ತಮ್ಮ ಮಂತ್ರಗಳ ಶಕ್ತಿಯನ್ನು ಪರೀಕ್ಷೆ ಮಾಡಿಕೊಳ್ಳುವುದಕ್ಕೋಸ್ಕರ ಸ್ಪರ್ಧಿಸಿದರು. 'ಸಾಮಿಧೇನೀ' ಎಂಬುದಾಗಿ ಪ್ರಸಿದ್ಧವಾದ ಋಕ್ಕುಗಳ ಪೈಕಿ ಒಂದು ಋಕ್ಕನ್ನು, ಬಹಳ ಹಸಿಯಾದ ವೃಕ್ಷವನ್ನು ನೋಡಿ ಹೇಳತಕ್ಕದ್ದು. ಅದರಿಂದ ಆ ಹಸಿಯ ಮರದಲ್ಲಿ

ಉತ್ಪನ್ನವಾಗದೇ ಹೋದರೆ ನಮ್ಮ ಮಂತ್ರದಲ್ಲಿ ಶಕ್ತಿಯು ಇಲ್ಲವೆಂದು ಭಾವಿಸಬೇಕು. ಈ ರೀತಿಯಾಗಿ ಸ್ಪರ್ಧಿಸಿ ನೃಮೇಧನು ಮಂತ್ರವನ್ನು ಉಚ್ಚರಿಸಲು ಪ್ರಕಾಶವಾನವಾದ ಅಗ್ನಿಯು ಹುಟ್ಟದೆ, ಹೊಗೆ ಮಾತ್ರ ಕಾಣಿಸಿಕೊಂಡಿತು. ಪರುಚ್ಛೇಪನು ಮಂತ್ರವನ್ನು ಉಚ್ಚರಿಸಿದನು. ಕೂಡಲೆ ಮಹಾಪ್ರಕಾಶದಿಂದ ಕೂಡಿದ ಅಗ್ನಿಯು ಉತ್ಪನ್ನವಾಯಿತು ಆಗ ನೃಮೇಧನು 'ಪರುಚ್ಛೇಪನೇ! ನೀನು ಸಂಪೂರ್ಣ ಗುರುಗಳ ಅನುಗ್ರಹಕ್ಕೆ ಪಾತ್ರನಾಗಿರುವುದಲ್ಲದೆ ಋಷಿಶಬ್ದ ವಾಚ್ಯನಾಗಲು ಅರ್ಹನೂ ಆಗಿದ್ದಿ. ನಮ್ಮಿಬ್ಬರಿಗೂ ಸಮಾನವಾದ ಪಾಂಡಿತ್ಯವಿದ್ದರೂ ನಿನ್ನ ಯೋಗ್ಯತೆ ನನಗೆ ಇಲ್ಲ. ನೀನೇ ಚೆನ್ನಾಗಿ ಮಂತ್ರವನ್ನು ಬಲ್ಲವನು' ಎಂಬುದಾಗಿ ನುಡಿದನು—. ಈ ಕಥಾಭಾಗವು "ತೈತ್ತಿರೀಯಸಂಹಿತೆ"ಯಲ್ಲಿ ಸ್ಪಷ್ಟವಾಗಿದೆ. ಆದ್ದರಿಂದ ಮಂತ್ರಶಕ್ತಿಯು ಗುರುವಿನ ಅನುಗ್ರಹದಿಂದಲೇ ಉಂಟಾಗತಕ್ಕದ್ದಾಗಿದೆ. ಈ ಕಾರಣದ ದೆಸೆಯಿಂದ ಗುರುಭಕ್ತಿಯು ಚೆನ್ನಾಗಿ ಇರಬೇಕು.

ಯಸ್ಯ ದೇವೇ ಪರಾ ಭಕ್ತಿಃ ಯಥಾದೇವೇ ತಥಾ ಗುರೌ
ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ

ಗುರುಗಳ ಅನುಗ್ರಹದಿಂದ ಅನುಪದಿಷ್ಟಭಾಗಗಳುಸಹ ಮಹಾತ್ಮರಿಗೆ ಗೊತ್ತಾಗುತ್ತೆಂದು ಶ್ರುತವಾಗಿದೆ. "ಗುರುವಿನ ಗುಲಾಮನಾಗೋತನಕ ದೊರೆಯುದಣ್ಣ ಮುಕುತಿ" ಎಂಬ ದೇವರನಾಮದಲ್ಲಿ ಸ್ಪಷ್ಟಪಡಿಸಿದ್ದಾರೆ ಶ್ರೀ ದಾಸರಾಯರು.

ಬ್ರಾಹ್ಮಣನಿಗೆ ಗಾಯತ್ರ್ಯುಪದೇಶ ಮೂಲಕವೇ ವೇದಾಧಿಕಾರ ಸಿದ್ಧಿಸುವುದು. ಗಾಯತ್ರೀಮಹಿಮೆಯು ಈ ರೀತಿ ಹೇಳಲ್ಪಟ್ಟಿದೆ—'ಕದ್ರೂ, ಸುಪರ್ಣೀ ಇವರಿಬ್ಬರು ಸವತಿಯರು. ಇವರುಗಳಲ್ಲಿ ಸೌಂದರ್ಯವಿಚಾರವಾಗಿ ಸ್ಪರ್ಧೆಯುಂಟಾಯಿತು. ಮಧ್ಯಸ್ಥಗಾರರು ಕದ್ರುವಿನ ಸೌಂದರ್ಯವನ್ನು ಹೊಗಳಿದರು. ಸುಪರ್ಣಿಯು ಪರಾಜಿತಳಾದಳು. ಇವರ ನಿಯಮದ ಪ್ರಕಾರ ಸುಪರ್ಣಿಯು ಕದ್ರುವಿಗೆ ದಾಸಿಯಾಗಿರಬೇಕಾಯಿತು. "ನಿನ್ನ ಮಕ್ಕಳು ಜಗತಿ, ತ್ರಿಷ್ಟುಪ್, ಗಾಯತ್ರಿ ಎಂಬುದಾಗಿ ಇದ್ದಾರೆ. ನೀನು ದೇವಲೋಕ ಸ್ತ್ರೀ. ನಿನ್ನ ಮಕ್ಕಳಿಗೆ ಸ್ವರ್ಗಲೋಕಕ್ಕೆ ಹೋಗಿಬರುವ

ಸಾಮರ್ಥ್ಯವಿದೆ. ಅವರುಗಳಿಂದ ಸ್ವರ್ಗಲೋಕದಲ್ಲಿರುವ ಸೋಮಲತೆ ಯನ್ನು ನನಗೆ ತಂದುಕೊಟ್ಟು ನಿನ್ನ ದಾಸ್ಯವನ್ನು ಬಿಡುಗಡೆ ಮಾಡಿಕೊ" ಎಂದು ಹೇಳಿದಳು ಕದ್ರು. ಸುಪರ್ಣಿಯು ಮಕ್ಕಳನ್ನು ಬಳಿಗೆ ಕರೆಸಿ ಈ ವೃತ್ತಾಂತವನ್ನು ಹೇಳಿದಳು.

ಛಂದಸ್ಸುಗಳಲ್ಲೆಲ್ಲಾ ದೊಡ್ಡದಾದ ಛಂದಸ್ಸು ಜಗತೀ ಛಂದಸ್ಸು. ಒಂದು ಪಾದಕ್ಕೆ ಹದಿನಾಲ್ಕು ಅಕ್ಷರಗಳು. ತಾನು* ಸ್ವರ್ಗಕ್ಕೆ ಹೋಗಿ ಸೋಮಲತೆಯನ್ನು ತರಲು ಸಾಧ್ಯವಾಗದೆ ಹಿಂತಿರುಗುವ ಕಾಲದಲ್ಲಿ ಸೋಮಾಭಿಮಾನಿದೇವತೆಯು ಈ ಛಂದಸ್ಸಿನ ಎರಡಕ್ಷರಗಳನ್ನು ಅಪಹಾರಮಾಡಿಬಿಟ್ಟಿತು. ವಾಪಸ್ಸು ಬರುವಾಗ ಪಶು ಮತ್ತು ದೀಕ್ಷಾ ಈ ಅಭಿಮಾನಿದೇವತೆಗಳನ್ನು ಕರೆದುಕೊಂಡು ಬಂತು. ಇದನ್ನು ನೋಡಿ ತ್ರಿಷ್ಟುಪ್ ಛಂದಸ್ಸು ಹದಿಮೂರು ಅಕ್ಷರಗಳಿಂದ ಕೂಡಿಕೊಂಡು ಪ್ರಯಾಣಮಾಡಿತು. ಸೋಮಾಭಿಮಾನಿದೇವತಾ ಸಮೀಪಕ್ಕೆ ಹೋಗಲು ಸಾಧ್ಯವಾಗದೆ ಹಿಂತಿರುಗಿತು. ಆಗ ಇದರ ಸಂಬಂಧವಾದ ಎರಡಕ್ಷರಗಳನ್ನು ಅಪಹಾರಮಾಡಿಬಿಟ್ಟಿತು. ಬರುವಾಗ ದಕ್ಷಿಣಾಭಿಮಾನಿದೇವತೆಯನ್ನು ಕರೆದುಕೊಂಡು ಬಂತು. ತ್ರಿಷ್ಟುಪ್ ಛಂದಸ್ಸು ಮಧ್ಯಛಂದಸ್ಸು. ಆದ್ದರಿಂದ ಮಾಧ್ಯಂದಿನ ಸವನದಲ್ಲಿ ದಕ್ಷಿಣಾ ಪ್ರದಾನಮಾಡತಕ್ಕದ್ದಾಗಿದೆ. ಋತ್ವಿಕ್ಕಿಗೆ ದಕ್ಷಿಣೆ ಕೊಡತಕ್ಕದ್ದೆ ಒಂದು ತಪಸ್ಸು. ಕೊನೆಯದಾಗಿ ಗಾಯಿತ್ರಿ ಛಂದಸ್ಸು ಅಭಿಮಾನಿದೇವತೆ ಯಿಂದ ಕೂಡಿಕೊಂಡು ಸೋಮಲತೆಯೊಡನೆ ಹೊಡೆದಾಡಿ, ಸೋಮಲತೆ ಯನ್ನೂ, ಅಭಿಮಾನಿದೇವತೆಯನ್ನೂ ಕರೆದುಕೊಂಡು, ಅಪಹೃತವಾದ ನಾಲ್ಕು ಅಕ್ಷರಗಳನ್ನೂ ತೆಗೆದುಕೊಂಡುಬಂದು ಕದ್ರುವಿಗೆ ಕೊಟ್ಟು ತನ್ನ ತಾಯಿ ಸುಪರ್ಣಿಯನ್ನು ದಾಸ್ಯದಿಂದ ಬಿಡುಗಡೆಮಾಡಿತು. ಅಂದಿನಿಂದ ಚತುರಕ್ಷರವಾದ ಗಾಯಿತ್ರಿಯನ್ನು ಅಷ್ಟಾಕ್ಷರಗಾಯಿತ್ರಿಯೆಂದು ಬ್ರಹ್ಮ-ವಾದಿಗಳು ಹೇಳುತ್ತಿದ್ದಾರೆಂದು ವೇದದಲ್ಲಿ ಗಾಯಿತ್ರೀಮಹಿಮೆಯು ಹೇಳಲ್ಪಟ್ಟಿರುತ್ತೆ. ಇಂತಹ ಗಾಯಿತ್ರೀವ್ಯಾಖ್ಯಾನವೇ ಪುರುಷಸೂಕ್ತ. ಪುರುಷಸೂಕ್ತವ್ಯಾಖ್ಯಾನವೇ ಮೂರು ವೇದಗಳು. ಈ ವೇದಗಳು

* ಆ ಛಂದಸ್ಸಿನ ಅಭಿಮಾನಿದೇವತೆ

ಅನಂತಗಳಾಗಿರುವ ಕಾರಣ ಕಲಿಯುಗದಲ್ಲಿ ಜನಿಸುವ ಜೀವರುಗಳ ಜೀವಮಾನಕ್ಕನುಗುಣವಾಗಿ ಋಗಾದಿವೇದಗಳನ್ನು ವಿಭಾಗಮಾಡಿ ನಾನಾ ಶಾಖೆಗಳನ್ನಾಗಿ ವಿಂಗಡಿಸಿ, ತನ್ನ ತನ್ನ ಶಾಖೆಯನ್ನಾದರೂ ಅಧ್ಯಯನ ಮಾಡಲಿ ಎಂದು ಪರಮ ಕರುಣಾಳುಗಳಾದ ವೇದವ್ಯಾಸರು ಉಪಕಾರ ಮಾಡಿರುತ್ತಾರೆ. ಶಾಖಾಭೇದೋಽಹ್ಯ ಶಕ್ತಿಜಃ ಎಂಬುದಾಗಿ ಇದೆ.

ವಿಭಕ್ತಶಾಖೆಯನ್ನಾದರೂ ಅಧ್ಯಯನಮಾಡಿ ಬ್ರಾಹ್ಮಣ್ಯವನ್ನು ಉಳಿಸಿಕೊಳ್ಳತಕ್ಕದ್ದು ನಮ್ಮ ಕರ್ತವ್ಯವಾಗಿದೆ.

ಶ್ರೀನರಸಿಂಹ ಸುಳಾದಿ

ವಾಚಕರ ಅಭಿಪ್ರಾಯದಂತೆ ಪ್ರತಿಸಂಚಿಕೆಯಲ್ಲೂ ಕೆಲವು ಉಗಾಭೋಗ ಅಥವಾ ಸುಳಾದಿಗಳನ್ನು ಶುದ್ಧಪ್ರತಿಯಿಂದ ಸಂಗ್ರಹಿಸಿ ಪ್ರಕಟಿಸಲು ನಿಶ್ಚಯಿಸಿ ಈ ಸಂಚಿಕೆಯಿಂದಲೇ ವ್ಯವಸ್ಥೆಯನ್ನು ಮಾಡಿದ್ದೇವೆ. ಮುಂದಿನ ಸಂಚಿಕೆಯು ತಮ್ಮ ಕೈಗೆ ಬರುವುದರೊಳಗೇ ಈ ಸುಳಾದಿಯನ್ನು ಕಂಠಪಾಠ ಮಾಡಿರುವಿರಿ ಎಂಬುದಾಗಿ ನಂಬಿದ್ದೇವೆ.

ಮುಂದಿನ ಸಂಚಿಕೆಯಲ್ಲಿ "ಶ್ರೀ ದುರ್ಗಾ ಸುಳಾದಿ"ಯನ್ನು ಪ್ರಕಟಿಸಲಾಗುವುದು.

ಶ್ರೀ ಶ್ರೀ ವಿಜಯದಾಸರವರು ರಚಿಸಿದ ಸುಳಾದಿಗಳಲ್ಲಿ ಅನೇಕವನ್ನು ತಾವೇ ಶಿಷ್ಯರಿಗೆ ಉಪದೇಶ ಕೊಟ್ಟು ಶಿಷ್ಯರ ದುಃಖಗಳನ್ನು ಪರಿಹಾರಮಾಡಿದುದು ಸಂಪ್ರದಾಯಾನುಗತಹರಿದಾಸದೀಕ್ಷಾವಂತರೆಲ್ಲರಿಗೂ ತಿಳಿದ ಸಂಗತಿ. ಅಂತಹ ವರಪ್ರದಾನ ಪಡೆದ ಸುಳಾದಿಗಳಲ್ಲಿ "ಶ್ರೀ ನರಸಿಂಹ ಸುಳಾದಿ"ಯೂ ಒಂದು.

"ಗುರು ಉಪದೇಶವಿಲ್ಲದ ಜ್ಞಾನ, ಗುರು ಉಪದೇಶವಿಲ್ಲದ ಯೋಗ, ಗುರು ಉಪದೇಶವಿಲ್ಲದ ಕ್ರಿಯೆ ಉರಗನ ಉಪವಾಸದಂತೆ ಕಾಣಿರೋ" ಎಂದು ಶ್ರೀ ದಾಸರಾಯರೆಂದ ಮಾತು. ಶ್ರೀಮದಾನಂದತೀರ್ಥ ಭಗವತ್ಪಾದರ ಮತಾನುವರ್ತಿಗಳಾದ ಆರಾದರೊಬ್ಬ ಸದಾಚಾರವಂತರಾದವರಿಂದ ಒಮ್ಮೆ ಸುಮುಹೂರ್ತದಲ್ಲಿ ಹೇಳಿಸಿಕೊಂಡು, ಮಡಿಯಲ್ಲಿ ಪಠಿಸಿ ಶ್ರೀ ಭಾರತೀರಮಣಮುಖ್ಯಪ್ರಾಣಾಂತರ್ಯಾಮಿ ಶ್ರೀ ಲಕ್ಷ್ಮೀನರಸಿಂಹದೇವನ ಅನುಗ್ರಹವಿಶೇಷ ಪಡೆದು ಸಂಸಾರಕ್ಲೇಶಗಳಿಂದ ಪಾರಾಗಿ ಇಷ್ಟಸಿದ್ಧಿ ಪಡೆಯೋಣ.

ಧ್ರುವತಾಳ

ವೀರಸಿಂಹನೆ ನಾರಸಿಂಹನೆ ದಯಾ-
ಪಾರವಾರನೆ ಭಯನಿವಾರಣ ನಿರ್ಗುಣ
ಸಾರಿದವರ ಸಂಸಾರವೃಕ್ಷದ ಮೂಲ
ಬೇರೊರಸೆ ಕೀಳುವ ಬಿರುದು ಭಯಂಕರ
ಘೋರಾವತಾರ ಕರಾಳವದನ ಅ-
ಘೋರ ದುರಿತಸಂಹಾರ ಮಾಯಾಕಾರ
ಕ್ರೂರದೈತ್ಯರ ಶೋಕಕಾರಣಉದುಭವ
ಈರೇಳುಭುವನಸಾಗರದೊಡೆಯ
ಆರೌದ್ರ ನಾಮ ವಿಜಯವಿಠಲ ನಾರಸಿಂಹ
ವೀರರಸೋತ್ತುಂಗ ಕಾರುಣ್ಯಾಪಾಂಗ ೧

ಮಠ್ಯತಾಳ

ಮಗುವಿನ ರಕ್ಕಸನು ಹಗಲಿರುಳು ಬಿಡದೆ
ಹಗೆಯಿಂದಲಿ ಹೊಯಿದು ನಗಪನ್ನಗವನಧಿ
ಗಗನ ಮಿಗಿಲಾದ ಅಗಣಿತ ಬಾಧೆಯಲಿ
ನೆಗೆದು ಬಗೆದು ಸಾವುಬಗೆದು ಕೊಲ್ಲುತಿರಲು
ಜಗದವಲ್ಲಭನೆ ಸುಗುಣಾನಾದಿಗನೆ
ನಿಗಮವಂದಿತನೆ ಪೊಗಳಿದಭಕತರ
†ತಗಲಿ ತೊಲಗನೆಂದು ಮಿಗೆ ಕೂಗುತ್ತಿರಲು
ಯುಗಯುಗದೊಳು ದಯಾ-
ಳುಗಳದೇವರ ದೇವ
ಯುಗಾದಿಕೃತುನಾಮ ವಿಜಯವಿಠಲ ಹೋಹೋ
ಯುಗಳಕರವ ಮುಗಿದು ಮಗುವು ಮೊರೆಯಿಡಲು ೨

ರೂಪಕತಾಳ

ಕೇಳಿದಾಕ್ಷಣದಲಿ ಲಾಲಿಸಿ ಭಕತರ-
ಮೌಳಿಯ ವೇಗದಲಿ ಪಾಲಿಸುವೆನೆಂದು

---

† ತಗಲಿ ತೊಲಗ = ಹಿಡಿದು–ಬಿಡ (ದ್ವಾಸುಪರ್ಣಾಶ್ರುತಿಯ ಭಾವ)

ತಾಳಿ ಸಂತೋಷವ ತೂಳಿ ತುಂಬಿದಂತೆ
ಮೂಲೋಕದ ಪರಿಪಾಲಯುದಿಂದ ಸು-
ಶೀಲ ದುರ್ಲಭನಾಮ ವಿಜಯವಿಠಲ *ಪಂಚ-
ಮೌಳಿಮಾನವ ಕಂಭ ಸೀಳಿಮೂಡಿದ ದೈವ ೩

ಝಂಪೆತಾಳ

ಲಟಲಟಾಲಟಲಟಾ ಲಟಕರಿಸಿ †ವನಜಜಾಂಡ
ಕಟಹ ಪಟಪಟಾ ಪಟತ್ಕ್ರುಟದಿ ಬಿಚ್ಚುತಿರಲು
ಪುಟಪುಟಾ ಪುಟನೆಗೆದು ಚೀರಿಹಾರುತ ಪಲ್
ಕಟಕಟಾ ಕಟಿಕಟ ಕಡಿದು ರೋಷದಿಂದ
ಮಿಟಿಮಿಟಿ ಮಿಟಿಮಿಟನೆ ರಕ್ತಾಕ್ಷಿಯಲಿ ನೋಡಿ
ತಟಿತ್ಕೋಟಿ ಉದ್ಧಟನೆ ಆರ್ಭಟವಾಗಿ ತೋರಲು
ಕುಟಿಲರಹಿತವ್ಯಕ್ತ ವಿಜಯವಿಠಲ ಶಕ್ತ
ಧಿಟನಿಟಿಲನೇತ್ರ ಸುರಕಟಕ ಪರಿಪಾಲ ೪

ತ್ರಿಪುಟತಾಳ

ಬೊಬ್ಬಿರಿಯೆ ವೀರಧ್ವನಿಯಿಂದ ತರುಗಿರಿ
ಹಬ್ಬಿ ಮುಂಚೂಣಿ ಉರಿ ಹೊಗರೆದ್ದು ಸುತ್ತೆ
ಉಬ್ಬುಸರವಿಗಾಗೆ ಅಬ್ಧಿಜ ನಡುಗುತಿರೆ
ಅಬ್ಧಿ ಸಮಿವುಕ್ಕಿ ಹೊರಚೆಲ್ಲಿ ಬರುತಿರೆ
ಅಬ್ಜಭವಾದಿಗಳು ತಬ್ಬಿಬ್ಬುಗೊಂಡರು
ಅಬ್ಬರವೇನೆನುತ ನಭದಗುಳಿಯು ತೆಗೆಯೆ
ಶಬ್ದ ತುಂಬಿತು ಅವ್ಯಾಕೃತಾಕಾಶಪರಿಯಂತ
ನಿಬ್ಬರ ತರುಗಿರಿಗಳು ಜಜ್ಜರಿಸೆ
ಒಬ್ಬರಿಗೊಶವಲ್ಲದ ಹೊಹೋ ವಿಜಯವಿಠಲ
ಇಬ್ಬಗೆಯಾಗೆ ಕಂಬದಿಂದಲಿ ಪೊರವಂಟ ೫

ಅಟತಾಳ

ಘುಡಿಘುಡಿಸುತ ಕೋಟಿ ಸಿಡಿಲು ಗಿರಿಗೆ ಬಂದು

---

* ಪಂಚಮೌಳಿ = (ಪಂಚಾಸ್ಯ) ಸಿಂಹ, † ಬ್ರಹ್ಮಾಂಡ

ಹೊಡೆದಂತೆ ಚೀರಿ ಬೊಬ್ಬಿಡುತಲೆ ಲಂಘಿಸಿ
ಪಿಡಿದು ರಕ್ಕಸನ ಕೆಡಹಿ ಮುಡಿಯ ತುಡುಕಿ
ತೊಡೆಯ ಮೇಲೇರಿಸಿ ಹೇರೊಡಲ ಕೂರುಗುರಿಂದ
ಪಡವಲಗಡಿಯ ಕಡೆಯ ತರಣಿಯ ನೋಡಿ
ಕಡುಗೋಪದಲಿ ಸದೆಬಡೆದು ರಕ್ಕಸನ್ನ
ನಿಡುಗರುಳನು ಕೊರಳಡಿಯಲ್ಲಿ ಧರಿಸಿದ
ಸಡಗರದದೈವ ಕಡುಗಲಿ ಭೂರ್ಭುವ ವಿಜಯವಿಠಲ ಪಾ-
ಲ್ಗಡಲೊಡೆಯ ಶರಣರವಡವೆ ಒಡನೊಡನೆ ೬

ಆದಿತಾಳ

ಉರಿಮುಸುಗಿ ಚತುರ್ದಶಧರಣಿ ತಲ್ಲಣಿಸಲು
ಪರಮೇಷ್ಠಿಹರಸುರರು ಸಿರಿದೇವಿಗೆ ಮೊರೆಯಿಡಲು
ಕರುಣದಿಂದಲಿ ತನ್ನ ಶರಣನಸಹಿತ ನಿನ್ನ
ಚರಣಕ್ಕೆ ಎರಗಲು ಪರಮಶಾಂತನಾಗಿ
ಹರಹಿದಿ ದಯವನ್ನು ಸುರರು ಕುಸುಮ ವರುಷ-
ಗರೆಯಲು ಭೇರಿವಾದ್ಯ ಮೊರೆವುತ್ತರರೇ ಎನಲು
ಪರಿವಾರ ವಾಲಗವಿಸ್ತರದಿಂದ ಕೈಕೊಳುತ
ಮೆರೆದು ಸುರರುಪದ್ರ ಹರಿಸಿಬಾಲನ್ನ ಕಾಯ್ದೆ
ಪರದೈವ ಗಭೀರಾತ್ಮ ವಿಜಯವಿಠ್ಠಲ ನಿನ್ನ
ಚರಿತೆ ದುಷ್ಟರಿಗೆ ಭೀಕರವೊ ಸಜ್ಜನಪಾಲ ೭

ಜೊತೆ

ಪ್ರಹ್ಲಾದವರದ ಪ್ರಸನ್ನಕ್ಲೇಶಭಂಜನ
ಮಹಹಂಸ ವಿಜಯವಿಠಲ ನರಮೃಗರೂಪ

ಪತಿವ್ರತಾಲಕ್ಷಣಸುಳಾದಿ

ಕರುಣಾಳುಗಳಾದ ಶ್ರೀ ಶ್ರೀ ವಿಜಯದಾಸಾರ್ಯರು ಪತಿವ್ರತೆಯರಾದ ಸುಮಂಗಲಿಯರನ್ನು ಕುರಿತು ಅನುಗ್ರಹಿಸಿದ ಸಂದೇಶವಿದು.

ಇದರಲ್ಲಿ ಶ್ರೀ ದಾಸರಾಯರು, ತಮಗೆ ಒಡಿವೆ–ವಸ್ತ್ರಗಳನ್ನು ತಂದಿಡಲಿಲ್ಲವೆಂದಾಗಲಿ, ಬಡವನೆಂದಾಗಲಿ, ಯಾವ ಕಾರಣದಿಂದಲೂ ಪತಿಭಕ್ತಿಗೆ ಕುಂದುಬರಬಾರದೆಂದಿದ್ದಾರೆ. ಮಹಿಳೆಯರ ನಿತ್ಯಅವಗಾಹನೆಗೆ ಅನುಕೂಲವಾಗಲೆಂಬ ಉದ್ದೇಶದಿಂದ ಈ ಸುಳಾದಿಯನ್ನು ಇಲ್ಲಿ ಮುದ್ರಿಸಿದೆ.

ಧ್ರುವತಾಳ

ಒಡಿವೆಗಳಿಡುವ್ರೋದು ಬಿಡದೆ ಪತಿಭಕುತಿ
ಹಿಡಿದು ನೋಡಲು ಗುಣ ಉಳ್ಳಂಥ ಮಡದೇರು
ಪೊಡವಿಯೊಳಿರುವಂಥ ದೃಢವಾದ ದ್ರವ್ಯದಿಂದ
ಜಡಿತದ ವಸ್ತ್ರಗಳ ಪಡದು ಧರಿಸಲದು
ಕೆಡಿಪೋದು ರೂಪವ ಕಾಮುಕ ಜನರೊಳು
ತಡೆಯದೆ ಮೋಹಿಸಿ ಮನಕ್ಲೇಶ ಕೊಡುವರು
ಒಡನೆಯೆ ನಿಮ್ಮೊಳು ಬಡಿವಾರ ವಪ್ಪುದು
ಬಿಡದೆ ಅಹಂಕಾರ ಮಮಕಾರ ಹೆಚ್ಚೋದು
ಕಡೆಮೊದಲಿಲ್ಲದ ದುಗುಡವು ಬಾಹೋದು
ಅಡಿಗಡಿಗೆ ಬಾಯ್ಬಿಡಬೇಕು ಜನರಿಗೆ
ಕಡುದುಃಖ ಪಡಬೇಕು ಒಡಿವೆ ಗಳಿಸುವಾಗ
ಕೊಡಬೇಕು ಒಡೆಯಗೆ ತೊಡರು ಒದಗಿದಾಗ
ಮಿಡುಕಬೇಕು ವತ್ತೆ ಇಡುವಾಗ ಒಡಿವೆಯ
ಬಿಡಿಬಿಡಿವಸ್ತ್ರದ ಗೊಡವೆ ನಿಮಗೆ ಯಾಕೆ
ಕಡಲಶಯನ ವಿಜಯವಿಠ್ಠಲನಾಮವೆಂಬ
ಒಡಿವೆ ವಸ್ತ್ರಗಳಿಟ್ಟು ನಡೆಯಿರಿ ಪತಿವ್ರತೇರು ೧

ತಾಳ ಮಟ್ಟ

ವಾಲಿಭಂಜನನೆಂಬೋ ಓಲೆಯನೆ ಧರಿಸಿ
ಶ್ರೀಲೋಲನೆಂಬೋ ಬಾವುಲಿಯನೆ ಇಡಿ
ನೀಲವರ್ಣನೆಂಬೋ ಮೇಲಾದ ಬುಗುಡಿ
ಕಾಳಿಂಗಭಂಗನೆಂಬೊ ಕಠ್ಠಾಣಿಯ ಕಟ್ಟಿ
ಭೂಲೋಲನೆಂಬೊ ಭುಜಕೀರ್ತಿಯ ಧರಿಸಿ
ಮೂಲಮೂರುತಿ ನಮ್ಮ ವಿಜಯವಿಠ್ಠಲನ
ಆಳಾದವನ ನಿಜತೋಳಿಲಿ ನಲಿದಾಡಿ ೨

ರೂಪಕತಾಳ

ಪರಮಪುರುಷನೆಂಬೋ ಹರಡಿಯ ಕೈಕಟ್ಟು
ಮುರವಿರೋಧಿ ಎಂಬೋ ಮುತ್ತಿನ ಮೂಗುತಿ
ಪುರುಷೋತ್ತಮನೆಂಬೋ ಪುನಗು ಸಾದಿನಬಟ್ಟು
ಕರಿವರದನೆಂಬೋ ಪರಿಪರಿ ಸರಗಳು
ಪರದೇವ ಹರಿ ಎಂಬೋ ಪಚ್ಚೆಯ ಪದಕವು
ತರಣಿಭಾಸನೆಂಬೋ ತನುಕಾಂತಿ ಹೆಚ್ಚಲು
ಸರುವದೇವರದೇವ ವಿಜಯವಿಠ್ಠಲನ
ಚರಣವ ನೆನೆದು ಸತತ ಸುಖಿಯಾಗುವುದು ೩

ಝಂಪಾ

ಶೇಷಶಯನನೆಂಬೊ ಸರಿಗೆಯ ಧರಿಸುತ
ದೋಷದೂರನೆಂಬೊ ಮೌರ್‍ಯವನ್ನು
ವಾಸುದೇವನೆಂಬೊ ವಲಿವ ಏಕಾವಳಿ
ಕೇಶವನೆಂಬೊ ಕಾಲಂದಿಗೆ ಗೆಜ್ಜೆಯು
ದೇಶಾಧಿಪತಿ ಎಂಬೊ ಕಾಂಚೀದಾಮ
ಲೇಸಾಗಿ ವರವೀವ ವಿಜಯವಿಠ್ಠಲನ
ದಾಸನಾದವನ ಸಂತೋಷಪಡಿಸುವದು ೪

ತ್ರಿಪುಟತಾಳ

ಕಮಲನಾಭನೆಂಬೊ ಕಡಗ ಕಂಕಣ ನಿಡಿ
ಅಮರಪಾಲಕನೆಂಬೊ ಅಚ್ಚಮುತ್ತಿನ ಹಾರ
ತಮಹರನೆಂಬೊ ಥಳುಕಿನ ಸರ ಹಾಕಿ
ರಮೆಯರಮಣನೆಂಬೊ ರಾಜೀಪ ಉಂಗುರ
ಉಮೆಯರಸವಂದ್ಯ ವಿಜಯವಿಠ್ಠಲನ
ಸಮಚರಣಂಗಳ ಸರ್ವದ ಸ್ಮರಿಸುತಿರಿ ೫

ಅಟತಾಳ

ಪಿನಾಕಿಸಖನೆಂಬೊ ಪಿಲ್ಯವನಿಡುವುದು
ಶ್ರೀನಾಥನೆಂಬೋ ಕಾಲುಂಗುರನಿಟ್ಟು
ವಾಣೀಪತಿಪಿತನೆಂಬೋ ಮೇಂಟಿಕೆ ಇಟ್ಟು
ಬಾಣಾಂತಕನೆಂಬೋ ಬಹುಬಣ್ಣದ ಸೀರೆ
ಕ್ಷೋಣೀಪತಿ ಎಂಬೊ ಚನ್ನಾದ ಕುಪ್ಪುಸ
ಮಾನಾದೊಡೆಯ ನಮ್ಮ ವಿಜಯವಿಠ್ಠಲನ
ಧ್ಯಾನದಲಿಪ್ಪುದೆ ಮಂಗಳಸೂತ್ರ ೬

ಏಕತಾಳ

ಪತಿಯೇ ಗತಿ ಎಂದು ಸತಿ ತಾನು ನುಡಿಯಬೇಕು
ಪತಿಯ ದರುಶನ ಶ್ರೀಪತಿಯ ದರುಶನವು
ಪತಿಯ ಸಲ್ಲಾಪವೆ ಶೃತಿಯವಚನಗಳು
ಪತಿಯಂಗಸಂಗವೆ ಉನ್ನತಿಗೆ ಗತಿ
ಪತಿಯಪಾದಜಲವೆ ತೀರ್ಥವೆನಲಿಬೇಕು
ಪತಿಯ ಉಚ್ಛಿಷ್ಟವೆ ಅಮೃತಪಾನವೆನ್ನಿ
ಪತಿಯ ಮಾತಿಗೆ ನಿತ್ಯ ಪ್ರತಿಯಾಗಿ ನುಡಿಯದೆ
ಹಿತವಾಗಿ ನುಡಿಯುತ ಹರುಷಪೊಂದಿಸಬೇಕು
ಪತಿಯಂತರ್ಗತ ವಿಜಯವಿಠ್ಠಲರೇಯನ
ಸತತ ನೆನೆದು ಸುಖಿಯಾಗುವುದು ೭

ಜತೆ

ವೈರಾಗ್ಯಭಾಗ್ಯವೆಂಬೋ ಸೌಭಾಗ್ಯದಿ ಓಲ್ಯಾಡಿ
ವಿರನಾದ ವಿಜಯವಿಠ್ಠಲನ್ನ ನೆನೆಯಿಂ ೮

ಟಿಪ್ಪಣಿ—

ಮೇಲೆ ಕೊಟ್ಟಿರುವ "ವಾಲಿಭಂಜನ, ಶ್ರೀಲೋಲ" ಈ ಹೆಸರುಗಳು ಪರಮಾತ್ಮಗೆ ಹೇಗೆ ಬಂತು, ಯಾವಾಗ ಬಂತು ಎಂಬಿವೇ ಮೊದಲಾದವುಗಳ ಬಗ್ಗೆ ಭಾರತ, ರಾಮಾಯಣ, ಭಾಗವತಾದಿ ಕಥೆಗಳನ್ನು ಶ್ರವಣ ಮಾಡಿ, ಮನನಮಾಡಿ ಪತಿವ್ರತೆಯರ ಮಾನರಕ್ಷಕತ್ವಾದಿ ಗುಣಪೂರ್ಣನಾದ ಭಗವಂತನ ಆಯಾ ರೂಪಗಳನ್ನು ಪತಿಯ ಅಂತರ್ಗತಗಳನ್ನಾಗಿ ಚಿಂತಿಸಿ ಪತಿಭಕ್ತಿಯನ್ನು ಹೆಚ್ಚಿಸಿಕೊಳ್ಳುವುದೊಂದರಿಂದಲೇ ಸಕಲ ಸಾಧನಗಳ ಫಲಗಳನ್ನೂ ಸ್ತ್ರೀಯರು ಪಡೆಯಬಹುದು. ಗಂಡಸರಿಗೆ ಹೇಳಿದಂತೆ ವಿಶೇಷವಾದ ವ್ರತ, ನಿಯಮ, ಉಪವಾಸಾದಿಗಳನ್ನು ಶಾಸ್ತ್ರದಲ್ಲಿ ಸ್ತ್ರೀಯರಿಗೆ ಹೇಳಿಲ್ಲ. ಪದ್ಮಪುರಾಣದಲ್ಲಿ "ನ ಚ ಸ್ತ್ರೀಣಾಂ ಪೃಥಕ್ ಯಜ್ಞಂ ನ ವ್ರತಂ ನಾಪ್ಯುಪೋಷಣಂ| ಭರ್ತಾ ಯದ್ವದತೇ ವಾಕ್ಯಂ ತತ್ತತ್ಕುರ್ಯಾದಕುತ್ಸಯಾ" ಎಂಬುದಾಗಿ ಶ್ರೀ ಶಂಕರಸ್ವಾಮಿಯು ಪಾರ್ವತೀದೇವಿಯನ್ನು ಕುರಿತು ಅಪ್ಪಣೆಕೊಡಿಸಿದ್ದಾನೆ.

ಆದುದರಿಂದ ಸಕಲ ಸಾಧನವೂ, ಪತಿಭಕ್ತಿ- ಆತನ ಸೇವೆ ಇವುಗಳಿಂದ ಪೂರ್ಣವಾಗುತ್ತೆನ್ನುವ ಆಶಯವನ್ನು ಶ್ರೀ ದಾಸರಾಯರು ಇದರಲ್ಲಿ ಅಪ್ಪಣೆಕೊಡಿಸಿದ್ದಾರೆ.

ಉಗಾಭೋಗ

ಜಗವ ಸುತ್ತಿಹದೆಲ್ಲ ನಿನ್ನ ಮಾಯವಯ್ಯ
ನಿನ್ನ ಸುತ್ತಿಹದೆಲ್ಲ ಎನ್ನ ಮಾನವಯ್ಯ
ಜಗಕೆ ಬಲ್ಲಿದನು ನೀನು ನಿನಗೆ ಬಲ್ಲಿದನು ನಾನು
ಜಗವು ನಿನ್ನೊಳಗೆ ನೀನು ಎನ್ನೊಳಗೆ
ಕರಿಯು ಕನ್ನಡಿಯಲ್ಲಿ ಅಡಗಿಪ್ಪತೆರನಂತೆ
ಎನ್ನೊಳು ನೀನು ಅಡಗಿಹೆಯೋ ಪುರಂದರವಿಠಲ

ಸಾಧನ ಸಂಪತ್ತು

ಬರೆದವರು:

ಶ್ರೀ ಹನುಮಂತರಾವ್ ಗೋರಾಬಾಳ,

ವಕೀಲರು, ಶ್ರೀವರದೇಂದ್ರ ಹರಿದಾಸಸಾಹಿತ್ಯ ಮಂಡಲ, ಲಿಂಗಸೂಗೂರು

ಸಾಧನವೆಂದರೇನು? ಎಂಬುವ ಈ ಪ್ರಶ್ನೆಯೇ ಇಂದು ನಾಳೆ ಮಹತ್ವದ್ದಾಗಿದೆ. ಹೊಟ್ಟೆಯ ಸಾಧನ, ಬಟ್ಟೆಯ ಸಾಧನ ಇವುಗಳ ಸಾಧನವೇ ಸಾಧನ. ಆಟ ನೋಟಗಳ ಸಾಧನ, ಸಿನಿಮಾ ಸಂಗೀತ ಸಾಧನ, ಮೋಟಾರು ರೈಲುಗಳನ್ನು ತಿರುಗಿ, ಊರು ಪಟ್ಟಣದ ಶೃಂಗಾರ ನೋಡುವದೊಂದು ಸಾಧನ. ಇದಕ್ಕೆಲ್ಲಾ ಗಳಿಕೆ ಸಾಧನ. ಈ ತರಹೆಯ ಸಾಧನವೇ ಬಹು ಪ್ರಾಮುಖ್ಯವಾಗಿ ನಡೆದದೆ. ಇದು ಸಾಧನವೆ?

"ಸಾಧ್ಯತೇ ಅನೇನ ಸಾಧನಂ" ಯಾವುವಾದರೂ ಪಡೆಯಲು ಪ್ರಯತ್ನಪಡುವಿಕೆಗೆ ಸಾಧನವೆನ್ನುವರು. ೧. ಭೂ, ದ್ರವ್ಯಾರ್ಜನೆ, ೨. ಗಮನಾಗಮನ, ೩. ಅರ್ಥನಿಷ್ಪಾದನ (ಹುಡುಕಿ ತೆಗೆಯೋಣ), ೪. ಉಪಕರಣ(ಸಲಕರಣೆ), ೫. ಅನುಗಮನ(ಹಿಂದಿನಿಂದ ಹೋಗೋಣ), ೬. ಉಪಾಯ, ಹಂಚಿಕೆ, ೭. ವಸ್ತುನಿರ್ಣಯ, ೮. ಗುರಿ ಮುಟ್ಟೋಣ, ೯. ಲಾಭ, ೧೦. ಮೈತ್ರೇಯ, ೧೧. ಪೀಡ (Torture), ೧೨. ಅನ್ನಾದಿ ರುಚಿಕಾರಕ (Savour), ೧೩. ಕುರುಹು (Sign), ೧೪. ವಿಧೇಯತಾ (Subduing), ೧೫. ಪ್ರಭುತ್ವ, ವಶೀಕರ (Mastering), ೧೬. ಲೇಖಪರ್ಯಾಯರೀತಿ, "ಧೈರ್ಯಂ ಸರ್ವತ್ರಸಾಧನಂ", "ಮೌನಂ ಸರ್ವತ್ರ ಸಾಧನಂ", ೧೭. ವ್ಯಾಕರಣರೀತ್ಯಾ ಲಿಂಗತ್ರಯ ನಿರ್ಣಯಿಸುವಿಕೆ, ೧೮. ಕಷ್ಟನಿವಾರಣೆ (Overcoming), ೧೯. ಕಾಯೇನ ವಾಚಾ ಮನಸಾ ಈ ತ್ರಿಕರಣ ಸಾಧನೆ, ೨೦. ಕಟ್ಟಳೆಗೈದ, (ನಿರ್ಬಂಧಗೈಸಿದ,) ನಿತ್ಯನೈಮಿತ್ತಿಕಕರ್ಮಾದಿ (Ceremonial) ೨೧. ಮನಸ್ಸಿನ ನಿರ್ಬಂಧಕರ್ಮ (Moral Duty), ೨೨. ಅಂತಃಶುದ್ಧಿ

ಮಾರ್ಗ (Obtaining Purity), ೨೩. ಮುಕ್ತಿಮಾರ್ಗ (Emanacipation). ಹೀಗೆ ಸಾಧನಬಗೆಗಳನ್ನು ಹಿಂದಿನ ಕಲಕೋಶಕಾರರು ಅರ್ಥಮಾಡಿದಂತೆ, ಪಾಶ್ಚಾತ್ಯರಾದ ಕಿಟ್ಲರರು ಸಹ ತಮ್ಮ ಕೋಶದಲ್ಲಿ ವಿವರಿಸಿರುವುದು ನಮ್ಮ ಪೂರ್ವಿಕ ಗ್ರಂಥಗಳ ಅನುಭವವೇ. ಹೊಸದಲ್ಲ. (ಆಧುನಿಕರ ರುಚ್ಯರ್ಥವಾಗಿ ಇವೆಲ್ಲ ಹೂಣ ಭಾಷೆಯಲ್ಲಿ ವಿವರಿಸ ಬೇಕಾಯಿತು.)

ಇಂತು ಬಗೆಸಾಧನಗೈವನು ಸಾಧನಪುರುಷನು. ಕೀರ್ತಿವಂತ ಪುರುಷನೆಂದು ಉಪನಿಷತಾದಿಗಳಲ್ಲಿ ವಿವರಿಸಿದೆ.

ಹೀಗೆ ಸಾಧನಮಾಡತಕ್ಕ ಪುರುಷನು ಸಾಧಕ, ಸಾಧಿಸುವ ವಸ್ತು ಸಾಧ್ಯ. ಸಾಧಕನಿಗೆ ಸಾಧಿಸುವ ವಸ್ತು ಪೂರ್ತಿ ದೊರೆತರೆ ಸಿದ್ಧ ಎಂದು ಶಾಸ್ತ್ರಮರ್ಯಾದೆ. "ಸಿದ್ಧಃ= ಸಿದ್ಧಿರಸ್ಯಾಸ್ತೀತಿ ಸಿದ್ಧಃ".

ಹೀಗೆ ಸಿದ್ಧನಾಗಲು, ಉಪಾಯವೇನು? ನಾನು ಯಾರು, ಎಲ್ಲಿಂದ ಬಂದೆ, ಹೇಗೆ ಬಂದೆ, ಇಷ್ಟು ಬಂಧನ ಕಷ್ಟವೇಕೆ, ಇದರ ಬಿಡುಗಡೆ ಹೇಗೆ ಎಂಬುದು, ಸರ್ವತ್ರ ಸಮನಾಗಿರುವ ಭಗವಂತನ ಸಖ್ಯ ಮೈತ್ರಿಯು ಭಕ್ತಿಭಾವದ ಲಾಭ ಒದಗಲು, ಸಮೀಚೀನವಾದ ಅನ್ನರುಚ್ಯಾದಿ ರಸಭೋಜನವನ್ನರಿತು ಆ ಸೂಕ್ಷ್ಮವಾದ ಅನ್ನರಸದಿಂದ ಕುರುಹು ಅರಿತು, ಸದ್ಬುದ್ಧಿಯು ಪುಟ್ಟಲು ಗುರುಗಳಲ್ಲಿ ವಿಧೇಯತಾ ವಹಿಸಿ, ಅವರ ಅಧೀನನಾಗಿ, ಹರಿಗುರುಗಳ ಪ್ರಭುತ್ವದಿಂದ ಸಕಲ ಶಾಸ್ತ್ರಾರ್ಥಗಳನ್ನು ತಿಳಿದು, ವಿಚಾರಮಾಡಿ, ದುಷ್ಟಕರ್ಮತ್ಯಾಗ ಮಾಡಿ, ಅತಿ ಧೈರ್ಯದಿಂದಲೂ, ಮೌನದಿಂದಲೂ, ಕಷ್ಟನಿವಾರಣೆಗಾಗಿ ತ್ರಿಕರಣಶುದ್ಧಿಗೈಸಲು ನಿರ್ಬಂಧ ಗೈಸಿದ ನಿತ್ಯನೈಮಿತ್ತಿಕಾದಿ ಕರ್ಮಗಳನ್ನು ನಿಷ್ಕಾಮನೆಯ ಬುದ್ಧಿಯಿಂದ ಆಚರಿಸುತ್ತ ಮನಸ್ಸನ್ನು ಸ್ವಾಧೀನದಲ್ಲಿಟ್ಟುಕೊಂಡು ಅಂತಃಶುದ್ಧನಾಗಿ ಮುಕ್ತಿಮಾರ್ಗವನ್ನು ಪಡೆಯುವದೇ **ಮುಖ್ಯಸಾಧನ**.

ಅಹೋ! ಈ ಪ್ರಕಾರ ಸಾಧನಗೈದರೆ ಮುಕ್ತಿಯು ತನ್ನಿಚ್ಛೆಯಂತೆ ಲಭಿಸುವದೇ? ಎಂದಿಗೂ ಇಲ್ಲ. ಇಲ್ಲ, ಇಲ್ಲ. ಮುಕ್ತಿ ಕೊಡುವ ಭಗವಂತನ ಕರುಣ ಪಡೆಯುವದು ಮುಕ್ತಿಮಾರ್ಗಸೋಪಾನ. ಆತನ ಅತ್ಯರ್ಥಪ್ರಸಾದವಾಯ್ತೆಂದರೆ ಮುಕ್ತಿ ಕರಗತವಾಯ್ತೆಂದೇ ನಿಶ್ಚಯ.

ಆದುದರಿಂದ, ಸಾಧಕನಿಗೆ ಮೊಟ್ಟಮೊದಲ ಸಾಧನವೆಂದರೆ ಭಗವಂತನ ಪ್ರಾಪ್ತಿಗೆ. ಯಾಕೆಂದರೆ ಭಗವತ್ ಪ್ರಾಪ್ತಿಯಾದಮೇಲೆ ಇನ್ನೊಂದು ದೊರಕಿಸಬೇಕೆಂಬುದೇ ಇಲ್ಲ.

ಆ ಮಹಾಪ್ರಭುವಿನ ಪ್ರಾಪ್ತಿಯನ್ನು ಯಾವ ಸಾಧಕನು ತನ್ನ ಜೀವನದ ಲಕ್ಷ್ಯ ಹೆಗ್ಗುರಿಯನ್ನಾಗಿ ಮಾಡಿರುವನೋ ಅವನ ಜೀವನವು ಹೇಗಿರುವದೆಂಬ ವಿಚಾರಾಂಶವು ಇಲ್ಲಿ ಮುಖ್ಯವಾಗಿದೆ. ಮೊದಲಿನ ಮಾತೇನೆಂದರ ಲಕ್ಷ್ಯವನ್ನು ಸ್ಥಿರಮಾಡುವಿಕೆ. ಲಕ್ಷ್ಯವು ಸ್ಥಿರವಾದಮೇಲೆ ಶರೀರದ ಆಶೆಯೂ ಇಲ್ಲದೆ ದೃಢನಿಶ್ಚಯದಿಂದ ಭಗವಂತನ ಪ್ರಾಪ್ತಿಗಾಗಿ ಪ್ರಯತ್ನಿಸಿ "ಕಾರ್ಯಂ ವಾ ಸಾಧಯಾಮಿ ಶರೀರಂ ವಾ ಪಾತಯಾಮಿ" (ಧ್ಯೇಯಸಾಧಿಸುತ್ತೇನೆ, ಆಗದಿದ್ದರೆ ದೇಹತ್ಯಾಗ ಮಾಡುತ್ತೇನೆ) ಎಂದು. ಆ ಹರಿಯ ಸೇವಾತತ್ಪರನಾಗಿರುವೆನೆಂಬ ದೃಢಭಕ್ತಿ ಬೇಕು. ದಾರ್ಢ್ಯ-ಭಕ್ತಿಯುಳ್ಳ ಸಾಧಕನು ಶ್ರೀಹರಿಯನ್ನು ಬಿಟ್ಟು ಅನ್ಯ ವಿಷಯಾದಿಗಳಲ್ಲಿ ಬುದ್ಧಿಹೀನನಾಗಲಿಬೇಕು, ಕುರುಡನಾಗಲಿಬೇಕು, ಕಿವುಡನಾಗಬೇಕು, ಮೂಕನಾಗಬೇಕು, ಚೊಂಚನಾಗಬೇಕು, ಹೆಳವನಾಗಲಿಬೇಕು.

ಇದರ ಕಾರಣವೇನೆಂದರೆ ಇದೇ ಮನ ಇದೇ ಬುದ್ಧಿ ಇವೇ ಇಂದ್ರಿಯಂಗಳಿಂದಲೇ ಭಗವಂತನ ಪ್ರಾಪ್ತಿಯಾಗುತ್ತದೆ. ಆದಕಾರಣ ಭಗವನ್ಮಾರ್ಗಗಾಮಿಯಾದ ಸಾಧಕನು ಒಳ್ಳೆ ಯುಕ್ತಿಗಳಿಂದ, ಸಾವಧಾನ ದಿಂದ ಇಂದ್ರಿಯವಿಷಯಗಳೆಂಬ ಚೋರರ ಕೈಯಿಂದ ಪಾರಾಗಿಹೋಗು ವುದು ಜಾಣತನ. ಹೀಗಿರುವವನು ತನ್ನ (ಲಕ್ಷ್ಯ) ಗುರಿಯಾದ ವಸ್ತುವಿನ ಚಿರಸ್ಮರಣೆಯಿಡಲು ಎಂದಿಗೂ ಪಥಭ್ರಷ್ಟನಾಗಲಾರನು.

ಕಿವಿಗಳು ಭಗವನ್ನಾಮ ಕೇಳಲಿ. ಕಣ್ಣುಗಳು ಭಗವನ್ಮೂರ್ತಿ ನೋಡಲಿ. ಕೈಗಳು ಭಗವತ್ಸೇವೆ ಮಾಡಲಿ. ಕಾಲುಗಳು ಪುಣ್ಯಕ್ಷೇತ್ರ ಮೆಟ್ಟಲಿ. ಬುದ್ಧಿಯು ಆ ಭಗವಂತನನ್ನೇ ನಿಶ್ಚಯವಾಗಿ ತಿಳಿಯಲಿ. ಆ ಭಗವಂತನ ಹೊರತಾಗಿ ಇಂದ್ರಿಯಗಳು ಎರಡನೆಯದನ್ನು ಕಾಣಬಯಸ ಬಾರದು ಎಂದು ವಾಸ್ತವವಾಗಿ ಯಾವನು ನಿರಂತರ ಭಗವಚ್ಚರಣಚಿಂತನ ಮಗ್ನನಾಗಿರುವನೋ ಅವನೇ ಬುದ್ಧಿಮಾನನು. ಭಗವಂತನನ್ನು ಮರೆತು, ವಿಷಯಗಳ ಸೇವನಮಾಡುವವನು ಮಹಾಮೂರ್ಖನು.

ಮುಖ್ಯಸಾಧನವು ಮುಕ್ತಿಗೋಸುಗವಾಗಿಯೇ ಇದೆಯಾದರೂ ಅದು ಸ್ವರೂಪ ಮತ್ತು ಫಲಪ್ರಾಪ್ತಿ ಇವೆರಡರಲ್ಲಿಯೂ ಪರತಂತ್ರ ಮೂಲಕವೇ. ಪರತಂತ್ರದಿಂದೊಡಗೂಡಿಯೇ ಅಂದರೆ ದಾಸ್ಯದಿಂದೊಡಗೂಡಿಯೇ ಸಾಧಕನೂ ಸಿದ್ಧನೂ ಇರುತ್ತಾನೆ. ಇದೇ ಪ್ರಪತ್ತಿಯೋಗ, ಶರಣಾಗತತ್ವ (to take refuge) ಮುಕ್ತಿಯಲ್ಲೂ ಇಪ್ಪುದು. ಇದರಲ್ಲಿ ಎರಡು ವಿಧವಾಗಿದೆ. ಮೊದಲನೇ ಪ್ರಕಾರದ ಸಾಧಕನು ತನ್ನನ್ನು ತಾನೇ ಭಗವಂತನ ಸಂರಕ್ಷಕತ್ವ (ಶರಣ) ದಲ್ಲಿ ಮುಳುಗುಹಾಕುತ್ತಾನೆ. ಮತ್ತು ಎರಡನೇ ಪ್ರಕಾರದ ಸಾಧಕನು "ಶರಣಾಗತವತ್ಸಲ ಭಗವಂತನೇ ನೀನು ನಿನ್ನ ರಕ್ಷಣದಲ್ಲಿ ತೆಗೆದುಕೋ" ಎಂದು ಭಗವಂತನನ್ನು ಆಶ್ರಯಿಸಿಕೊಂಡಿರುವನು.

ಕೋತಿಯ ಮರಿಯು ತನ್ನ ತಾಯಿಯ ಹಿಂದೆಹಿಂದೆ ಹೋಗುತ್ತದೆ. ಎಲ್ಲಾದರೂ ಹೋಗಲು ತನ್ನ ತಾಯಿಯ ಹೊಟ್ಟೆಗೆ, ಅಂಟಿಕೊಂಡು ಕೈಬಿಡದಂತೆ ತಾಯಿಹೋದಂತೆಲ್ಲ ಹೋಗುತ್ತದೆ. ಕೋತಿಯು ತಾನು ಸ್ವಯಂ ಮರಿಯನ್ನು ಹಿಡಿದುಕೊಳ್ಳುವುದಿಲ್ಲ. ಆ ಮರಿಯು ತನ್ನ ಎದೆಗೆ ಬಂದಪ್ಪಿ ಅಂಟಿ ಹಿಡಕೊಂಡಮೇಲೆ ಆ ಮರಿಯನ್ನು ತೆಗೆದುಕೊಂಡು ಓಡುತ್ತ ನಡೆಯುತ್ತದೆ.

ಆದರೆ ಬೆಕ್ಕಿನಮರಿಯು ಸ್ವಯಂ ತಾನು ಏನೂ ಮಾಡುವುದಿಲ್ಲ. ಎಲ್ಲಿ ತಾಯಿಯು ತೆಗೆದುಕೊಂಡು ಹೋಗುವದಿದೆಯೋ ಅಲ್ಲಿಗೆ, ಬೆಕ್ಕು ತಾನು ಸ್ವಯಂ ಬಾಯಲ್ಲಿ ತನ್ನ ಮರಿಯನ್ನು ಹಿಡಿದುಕೊಂಡೇ ತೆಗೆದುಕೊಂಡುಹೋಗುತ್ತದೆ. ಇದೇ ಲೋಕದೃಷ್ಟಾಂತದಂತೆ ಉಭಯಸಾಧಕರೂ ಭಕ್ತಿಯುಳ್ಳವರು. ಎಲ್ಲ ಪ್ರಕಾರದಿಂದ ಭಗವಂತನಮೇಲೆ ಭಾರವಹಿಸಿ ನಿರ್ಭಯರಾಗುವದು.

"ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್"

ಎಂಬ ಶ್ರೀಕೃಷ್ಣಪ್ರಭುವಿನ ವಾಕ್ಯದಂತೆ ಆ ಮಹಾಪ್ರಭುವಿನ ಅಖಂಡ ಚಿಂತನ ಮಾಡುವನೇ ಅನನ್ಯ ಸಾಧಕ.

ಬ್ರಹ್ಮಕುಲಾಭಿಮಾನಿಗಳಾದ ಭೃಗುಋಷಿಗಳು ಶ್ರೀ ವಿಜಯದಾಸಾರ್ಯರಾಗವತರಿಸಿ ಹಾಡಿದ ಸುಳಾದಿಗಳಲ್ಲಿ, ಆಗಮಗಳಲ್ಲಿ ಉಕ್ತವಾದ ಸಾಧನಮಾರ್ಗಗಳು ಪಂಡಿತ ಪಾಮರರಿಗೆ ಉಪಯುಕ್ತಗಳಾಗಿ ಹೇಳಲ್ಪಟ್ಟವೆ. ಶ್ರೀಹರಿದಾಸಸಾಹಿತ್ಯವನ್ನು ಕೂಲಂಕಷವಾಗಿವ್ಯಾಸಂಗ ಮಾಡಲೇಬೇಕೆನ್ನುವಷ್ಟು ಹೊರಹೊಮ್ಮುವ ರಸವಿಶಿಷ್ಟಗಳಾಗಿವೆ. ಅವುಗಳಲ್ಲಿನ ಅರ್ಥವನ್ನು ತಿಳಿದು ನೋಡುತ್ತಹೋದರೆ ವೈರಾಗ್ಯ, ಜ್ಞಾನ, ಭಕ್ತಿ ಇವು ದೊರೆಯಬೇಕಾದರೆ ನಡೆಯುವ ಬಗೆ ಹೇಗೆಂಬುದು ವ್ಯಕ್ತವಾಗುವುದರಿಂದ ಶ್ರೀಹರಿದಾಸರುಗಳ ಪದಪುಂಡರೀಕಗಳ ಆಶ್ರಯವೇ ನಮಗೆ ಇಂದಿನ ಸಾಧನಸಂಪತ್ತು. ಮುಂದೆ ಅವರ ಅನುಗ್ರಹದಿಂದ ಸಾಧಿಸುವುದು ಮುಖ್ಯಸಾಧನಸಂಪತ್ತು.

ಎಂದಿಗೆ ನಿನ್ನ ಪದ ಕಾಂಬೆ!

ರಾಗ—ತೋಡಿ ತಾಳ—ಆದಿ

ಎಂದಿಗೆ ನಿನ್ನ ಪದ ಕಾಂಬೇ। ರಂಗ
ಎಂದಿಗೆ ಪದ ಕಾಂಬೇ ಪ

ಎಂದಿಗೆ ನಿನ್ನ ಪದ ಕಂಡೆ ಭಕುತಿಯಿಂದ
ಅಂದಿಗೆ ಭವಪಾಶ ತುಂಡೆ। ಸ್ವಾಮಿ ಅ.ಪ

ಇಂದಿರಾದೇವಿ ನಿನ್ನ ಪೊಂದಿದ್ದ ಕಾರಣ
ದಂದುಗ*ವನು ಕಾಣಲಿಲ್ಲ। ಸ್ವಾಮಿ ೧

ಬೊಮ್ಮನು ನಿನ್ನ ಮಗ ನಮ್ಮಿಸಿ ತುತಿಸುವ
ಮೊಮ್ಮಗ ಕುಣಿಕುಣಿದಾಡುವ। ಸ್ವಾಮಿ ೨

ನಿನ್ನನೆ ವಾಸುದೇವ ವಿಠ್ಠಲ। ಎನ್ನ
ಮನ್ನದಿ ಭಜಿಸೋದು ಬಲ್ಲೆಲಾ। ಸ್ವಾಮಿ ೩

—ಶ್ರೀ ವ್ಯಾಸತತ್ವಜ್ಞರು (ಐಜಿಸ್ವಾಮಿಗಳವರು)

---

* ದಂದುಗ (ದ್ವಂದ್ವೌಘ) = ಪ್ರಾಕೃತಸುಖದುಃಖಗಳು

"ಶ್ರೀಪತಿರ್ವೂನದೋ ನಃ"

"ಭಾರತಿ ಭಕುತಿಯನು ಕೊಡುವುದು"



ರಾಗ—ಶಂಕರಾಭರಣ ತಾಳ—ಆದಿ

|| ಭಾರತಿ ಭಕುತಿಯನೂ ಕೊಡುವದು ವೂರುತಸತಿ ನೀನೂ।
|| ಮೂರುಲೋಕದೊಳಗಾರು ನಿನಗೆ ಸರಿ ವೂರಾರಿಗಳಿಂದಾರಾ
|| ಧಿತಳೇ। ಪ|| ಶರಣುವೂಡುವೆ ನಿನಗೆ—ಸತತ ಶ್ರೀಹರಿ
|| ಯ ತೋರಿಸೆನಗೇ—ತರುಳವಾದಕರಿವಿನ ವೊರಿಗಾವುತ್ಯ
|| ರದಿ ಬಂದು ಸುಖಗರದತ್ಯರದಲೀ ||೧|| ವಾಣಿಯುಂನ್ನವದ

॥ ನಾದಲಿ ಕೊಡು ಮಾಣಪೆ ಹರಿಸ್ತವನಾ। ವೀಣಾಪುಸ್ತಕಪಾ
॥ ಣಿ ಪಂಕಜಶುಕವಾಣಿ ಕೋಕಿಲದಗಾನಿಯೆಯಾ○ಲಿ
॥ ಸೆ ॥ ೨ ॥ ಸುಂದರಿ ಸುಖಕಾರೀ ಸು○ ಮನಸಬೃಂದಶೋಭಿತ
॥ ಕಬರೀ—ಮಂದಹಾಸಮುಖದಿಂದ ನೋಡಿ ನಿಂನ್ನ ಕಂದನೆಂದು ಕರಿ
॥ ಮುಂದಕೆನ್ನನೂ ॥ ೨ ॥ ದಿವಿಜರ ಸತಿಯರಿಗೆ ಧರಿಯೊಳುದ್ಭ
॥ ವಿಯ ಶಾಪವಾಗೇ—ತವಕದಿಂದಲಿ ಪೊರೆದತ್ಯರದಲ್ಯನ್ನಯಕ
॥ ವಳ ಬುದ್ಧಿಯನು ಕಳದು ಕುಶಲ ಕೊಡೆ ॥ ೪ ॥ ಮಂಗಳಾಂಗೆಯ
॥ ನ್ನಾ ಅಂತರಂಗದಲಿರು ಮುಂನ್ನಾ—ತುಂಗವಿಕ್ರಮತಂದೆ ಗೋಪಾ
॥ ಲವಿಠಲನೂ ಹಿಂಗದೆ ವಲಿದು ಸುಖಂಗಳ ನೀಡುವಾ ॥ ೫ ॥
॥ ಮಧ್ವೇಶಾರ್ಪಿತವೂ ॥ ॥ ॥ ॥ ॥

ಗಮನಿಸಬೇಕಾದ ಅಂಶಗಳು—

೧. ಅನೇಕ ಕಡೆಯಲ್ಲಿ ಈ ನಾಮವು ೩ ನುಡಿ ಪ್ರಚಾರದಲ್ಲಿದೆ. ಇದರಲ್ಲಿ ೫ ನುಡಿಗಳಿವೆ. ಅಕ್ಷರ ಸಂಸ್ಕೃತದಲ್ಲಿರುವುದರಿಂದ ಕನ್ನಡದಲ್ಲಿ ಬರೆಯಲ್ಪಟ್ಟಿದೆ.

೨. ಮೂಲಪ್ರತಿಯಲ್ಲಿ (ಸಂಸ್ಕೃತದಲ್ಲಿ) ಯಾವ ಅಕ್ಷರವು ದೀರ್ಘ, ಹ್ರಸ್ವಗಳಾಗಿ ದೆಯೋ ಹಾಗೆಯೇ ಈ ಮೇಲಿನ (ಕನ್ನಡ) ನಾಮದಲ್ಲೂ ಬರೆದಿದೆ.

ಹಾಡುವುದಕ್ಕೆ ಅನುಕೂಲವಾಗುವಂತೆ ಅವರು ಬರೆದಿದ್ದಾರೆ. ಆದುದರಿಂದ ಆಕ್ಷೇಪಕ್ಕೆ ಸ್ಥಳವಿಲ್ಲ.

೩. ○ ಈ ಚಿಹ್ನೆಗಳಿರುವಲ್ಲಿ ಅವರು ಬರೆಯುವ ಕಾಲಕ್ಕೇ ಹುಳತಿಂದು ಆ ಸ್ಥಳದಲ್ಲಿ ಕಾಗದವಿಲ್ಲವಾಗಿದೆ ಎಂದು ತಿಳಿಯಬೇಕು.

೪. ಕಾಗದ ದೊರೆಯುವುದು ಆ ಕಾಲದಲ್ಲಿ ಕಷ್ಟವಾಗಿದ್ದುದರಿಂದಲೂ, ಸಿಕ್ಕಷ್ಟೇ ಕಾಗದದಲ್ಲಿ ೫ ನುಡಿಗಳನ್ನೂ ಪೂರೈಸಬೇಕಾಗಿದ್ದುದರಿಂದಲೂ ಪಂಙ್ತಿಯ ಕೆಳಗೆ ಪಂಙ್ತಿಯನ್ನು ಅವರು ಬರೆದಿಲ್ಲವೇ ಹೊರತು, ನಾಮದಲ್ಲಿ ಪ್ರಾಸಲೋಪವಿಲ್ಲ ಎಂದರಿಯಬೇಕು.

೫. ೧೫೦ ವರ್ಷಕ್ಕಿಂತ ಪೂರ್ವದ ಕಾಗದವಾದ್ದರಿಂದ ಇದನ್ನು ಹೆಚ್ಚುಕಾಲ ಕಾಪಾಡುವುದು ಕಷ್ಟವೆಂದು ಭಾವಿಸಿ ವಾಚಕರಾದ ತಮ್ಮೆದುರಿಗೆ ಅವರ ಅಕ್ಷರವನ್ನು ಇಡಲಾಗಿದೆ.

ಶ್ರೀ ಶ್ರೀವ್ಯಾಸತತ್ವಜ್ಞ ತೀರ್ಥಶ್ರೀಪಾದಂಗಳವರ (ಐಜಿ ಸ್ವಾಮಿಗಳು) ಹಸ್ತಾಕ್ಷರವಿದು. ಶ್ರೀ ಗೋಪಾಲದಾಸರವರ (ಭಾಗಣ್ಣ ದಾಸರವರು) ಮನೆಯಲ್ಲಿದ್ದ ಹಳೆಯ ಕಡತದಿಂದ ಸಂಗ್ರಹಿಸಿದ ಒಂದು ಪತ್ರದಲ್ಲಿ ಶ್ರೀ ಶ್ರೀಗಳವರು ಬರೆದಿಟ್ಟ ಈ "ಭಾರತಿ ಭಕುತಿಯನು ಕೊಡುವುದು" ಎಂಬ ಭಾರತೀದೇವಿಯ ಸ್ತೋತ್ರವು ದೊರೆಯಿತು. ಶ್ರೀ ಶ್ರೀಪಾದಂಗಳವರ ಹಸ್ತಾಕ್ಷರವನ್ನು ನಮ್ಮ ವಾಚಕವೃಂದದ ನೇತ್ರಗಳಿಗೆ ಹಬ್ಬವನ್ನು ಉಂಟುಮಾಡಬೇಕೆಂಬ ಒಂದು ಹಿರಿಯಾಸೆಯಿಂದ ಇಲ್ಲಿ ಕೊಡಲಾಗಿದೆ. ಇನ್ನೂ ಕೆಲ ಮಹನೀಯರ ಹಸ್ತಾಕ್ಷರಗಳೂ ನಮಗೆ ದೊರೆತಿವೆ. ಅವನ್ನೂ ಹೀಗೇ ಪ್ರಕಟಿಸಬೇಕೆಂಬ ಆಸೆಯೇನೋ ಪ್ರಬಲವಾಗಿ ನಮಗಿದೆಯಾದರೂ ಶ್ರೀಹರಿಭಕ್ತರನೇಕರಿಗೆ ನಮ್ಮ ಪತ್ರಿಕೆಯ ಅಭಿವೃದ್ಧಿಯ ಬಗ್ಗೆ ನಿರ್ವ್ಯಾಜ ಪ್ರೇಮ ಒದಗಿದಾಗ ಆ ನಮ್ಮ ಬಯಕೆ ಪೂರೈಸಲು ಸಾಧ್ಯ. ಇಂತಹ ಕೆಲಸಗಳು ಭಕ್ತರಿಗೆ ದೃಗ್ಗೋಚರವಾಗಬೇಕಾಗಿದ್ದರೆ, ಅಂತರಂಗದಲ್ಲಿ ಅವರಿಗೆ ಹೇಗೆ ಭಕ್ತಿಯೋ ಹಾಗೆಯೇ ಬಹಿರಂಗದಲ್ಲಿಯೂ ದ್ರವ್ಯಸಹಾಯ ಒದಗಿಸಬೇಕೆಂಬ ಆಸೆಯು ಹೊರಹೊಮ್ಮಬೇಕು. ಅಲ್ಲವೇ ?

ತಮ್ಮ ತಂದೆಗಳಲ್ಲಿ ವ್ಯಾಸಂಗಮಾಡಿ ದೊಡ್ಡ ಪಂಡಿತರಾಗಿದ್ದ ಶ್ರೀ ವೇಂಕಟರಾಮಾಚಾರ್ಯರು (ಶ್ರೀಗಳವರ ಪೂರ್ವಾಶ್ರಮದ ಹೆಸರು) ಶ್ರೀ ಗೋಪಾಲದಾಸಾರ್ಯರ ಶಿಷ್ಯರು. ಅಂಕಿತವೂ ಅವರಿಂದಲೇ 'ವಾಸುದೇವವಿಠ್ಠಲ' ಎಂದು. ಒಮ್ಮೆ ಗುರುಗಳಾದ ದಾಸರನ್ನು 'ತಮ್ಮಂತೆಯೇ ನನಗೂ ಒಳಹೊರಗೆ ಶ್ರೀಹರಿದರ್ಶನವಾಗುವಂತೆ ಅನುಗ್ರಹ ಮಾಡಬೇಕು' ಎಂದರಂತೆ! ಶ್ರೀ ಗೋಪಾಲದಾಸರು 'ನಿಮಗೆ ಮುಂದಿನ ಜನ್ಮದಲ್ಲಿ ಅಪರೋಕ್ಷ' ಎಂದರಂತೆ. 'ಎಂದಿಗೋ ಮುಂದೆ ಜನ್ಮ' ಎಂದರಂತೆ ಆಚಾರ್ಯರು. ಶ್ರೀ ದಾಸರು 'ಶ್ರೀಹರಿದರ್ಶನಕ್ಕೇ ನೀವು ಹಂಬಲಿಸುವುದಾದರೆ ನಿಮ್ಮ ಜನ್ಮ ಶ್ರೀಹರಿಯನ್ನು ಕಾಣಲಿಕ್ಕೇ ಮೀಸಲು ಎಂಬಷ್ಟು ದಾರ್ಢ್ಯ ನಿಮ್ಮ ಹೃದಯದಲ್ಲಿ ವಿರಾಜಿಸುತ್ತಿದ್ದರೆ ಯತ್ಯಾಶ್ರಮ ಸ್ವೀಕರಿಸಿಬಿಡಿ—ಬೇರೆ ಜನ್ಮವಾಯಿತು, ಅಷ್ಟೇ!' ಎಂದರಂತೆ. ತಕ್ಷಣ ಹೊರಟಿದ್ದೇ ತಡ, ಶ್ರೀ ಶ್ರೀ ಭುವನೇಂದ್ರತೀರ್ಥಶ್ರೀಪಾದಂಗಳವರಲ್ಲಿ (ಶ್ರೀ ರಾಯರಮಠದ ಶ್ರೀಗಳವರು) ಆಶ್ರಮಕ್ಕೆ ಯಾಚಿಸಿ, ಪಡೆದೇ

ಪಡೆದರು. ಆ ಮಹಾಮಹಿಮರು 'ನ್ಯಾಸತತ್ವಜ್ಞ ತೀರ್ಥ'ರೆಂದು ಅನ್ವರ್ಥನಾಮಕರಣ ಮಾಡಿದುದೊಂದೇ ಸಾಲದೇ, ಆ ಪ್ರಭುಗಳ ಭವಿಷ್ಯದ್‌ಜ್ಞಾನಪ್ರಕಟನೆಗೆ! ಆಚಾರ್ಯರ ಜ್ಞಾನದ ಆಳತೆಗೆ!

ತುರ್ಯಾಶ್ರಮದಲ್ಲೂ ಪ್ರವಚನ ಮತ್ತು ಟಿಪ್ಪಣಿರಚನೆ ಇವುಗಳಿಗೆ ಏನು ಸ್ಥಾನವೋ, ಕನ್ನಡದಲ್ಲೂ ದೇವರನಾಮರಚನೆ, ಆ ನಾಮಾರ್ಥ-ಪ್ರತಿಪಾದನೆ ಇವುಗಳಿಗೆ ಅದೇ ಸ್ಥಾನ ಕೊಡುತ್ತಿದ್ದರು. ಹೊಸ ಗುರುಗಳು ಸಿಕ್ಕಿಬಿಟ್ಟರಲ್ಲ ಎಂದು ಗೃಹಸ್ಥಾಶ್ರಮಿಗಳಾದ ಶ್ರೀ ಗೋಪಾಲದಾಸರವರಲ್ಲಿ ಗೌರವ ಕುಂದಾಗಲಿಲ್ಲ ಶ್ರೀಗಳವರಿಗೆ. ಅವರಿಂದ ರಚಿತವಾದ ನಾಮಗಳು, ಶ್ರೀಗಳವರಿಂದ ಬರೆದಿಡಲ್ಪಡುತ್ತಿದ್ದವು. ಪಠಿಸಲ್ಪಡುತ್ತಿದ್ದವು.

ಸಂಸ್ಕೃತದಲ್ಲಿ ಶ್ರೀಗಳವರು ಮಾನಸಸ್ಮೃತಿ, (ಪೂರ್ವಾಶ್ರಮದಲ್ಲಿ ಮಾಡಿದ್ದೆನ್ನುತ್ತಾರೆ) ಗಾಯತ್ರೀಸಾರಸಂಗ್ರಹ, ಉಭಯಾನೌಚಿತಿ, ಸುಧಾದ್ಯುಕ್ತರಹಸ್ಯ, ನ್ಯಾಯಾಮೃತಮುಕ್ತಿಕಾವ್ಯಜನ, ವಿಷ್ಣುತತ್ವ-ನಿರ್ಣಯಕ್ಕೆ-ಲಘುಪ್ರಭಾ, ಗುರುಪ್ರಭಾ, ಸುಧಾಪ್ರಮಾಣಾಧಿಕರಣಕ್ಕೆ-ರಸರಂಜಿನೀ ಇವೇ ಮೊದಲಾದ ಟಿಪ್ಪಣಿಗಳನ್ನೂ, 'ಕುಲಿಶ' ಮೊದಲಾದ ಸ್ವತಂತ್ರ ಗ್ರಂಥಗಳನ್ನೂ ರಚಿಸಿದ್ದಾರೆ.

ಇಂತಹ ಮಹನೀಯರಾದ ಶ್ರೀಪಾದಂಗಳವರು ಶ್ರೀಹರಿದಾಸ-ಸಾಹಿತ್ಯದ ಕನ್ನಡಭಾಗಕ್ಕೆ ಎಷ್ಟು ಗೌರವ ಸಲ್ಲಿಸುತ್ತಿದ್ದರೆಂಬುದಕ್ಕೂ ಈ ಮೇಲೆ ಕೊಟ್ಟಿರುವ ನಾಮವನ್ನು ಬರೆದಿಟ್ಟುಕೊಂಡಿದ್ದುದು ಅವರಲ್ಲಿದ್ದ ಗುಣೈಕಪಕ್ಷಪಾತಿತನಕ್ಕೂ ನಿದರ್ಶನವಾಗಿದೆ.

|| ಶ್ರೀ ವಿಜಯಗುರುಃ ಪ್ರಸನ್ನೋ ಭೂಯಾತ್ ||

ಶ್ರೀ ಗುರುತಿಲಕ ಶ್ರೀಪಾದರಾಯರು

[ಜ್ಯೇಷ್ಠ ಶುದ್ಧ ೧೪ ಶ್ರೀ ಶ್ರೀ ಶ್ರೀಪಾದರಾಜರವರ ಆರಾಧನಾ ಮಹೋತ್ಸವ—ಶ್ರೀ ವಿಜಯದಾಸಾರ್ಯರು "ದ್ವಿಪಾದಪಶು ಕಣೋ ಈ ಮುನಿಯ ನಂಬದವ" ಎಂದಿದ್ದಾರೆ. ಆದಕಾರಣ ಕೆಳಗಿನ ಶ್ರೀ ವ್ಯಾಸರಾಜಕೃತ ಶ್ರೀಪಾದರಾಜರವರ ಪದ ಪಠಿಸಿ ರಾಜರನ್ನು ನಂಬಿ ಕೃತಕೃತ್ಯರಾಗೋಣ.

ರಾಗ—ನಾಟಿ　　　ತಾಳ—ಅಟ

ವಾದಿಗಜಮಸ್ತಕಾಂಕುಶ ಸುಜನ ಬುಧಗೇಯ
ಮೇದಿನೀಸುರವಂದ್ಯ ಶ್ರೀಪಾದರಾಯ ಪ

ಸಕಲಶಾಸ್ತ್ರಕಲಾಪ ಸನ್ಯಾಸಕುಲದೀಪ
ಸಕಲಸತ್ಯಸ್ಥಾಪ ಸುಜ್ಞಾನದೀಪ
ಪ್ರಕಟಪಾವನರೂಪ ಅರಿಕುಜನಮತಲೋಪ
ನಿಕಟವರ್ಜಿತಪಾಪ ಕೀರ್ತಿಪ್ರತಾಪ ೧

ಹರಿಪದಾಂಬುಜಭೃಂಗ ಪರಮತಾಹಿವಿಹಂಗ
ಪರಮಸುಗುಣಾಂತರಂಗ ಭವದುರಿತಭಂಗ
ಶರಣಕೀರ್ತಿತರಂಗ ಶತ್ರುತಿಮಿರಪತಂಗ
ಶರಣು ಶುಭಚರಿತಾಂಗ ಷಟ್ಶಾಸ್ತ್ರಸಂಗ ೨

ಸಿರಿಕೃಷ್ಣ ದಿವ್ಯಪಾದಾಬ್ಜ ಚಿಂತಾಲೋಲ
ವರಹೇಮವರ್ಣಮುನಿಪತಿಯ ಸುಕುಮಾರ
ಗುರುತಿಲಕ ಶ್ರೀಪಾದರಾಯ ಅಮಿತೋದ್ಧಾರ
ಶರಣಜನಸುರಧೇನು ಭಕ್ತಮಂದಾರ ೩

"ತಿಳಿಕೊ ನಿನ್ನೊಳಗೆ ನೀನೆ"

ಪ್ರಾಚೀನ-ನವೀನ ನ್ಯಾಯ, ವ್ಯಾಕರಣ-ಸಾಹಿತ್ಯ-ಕನ್ನಡ ವಿದ್ವಾನ್
ಎನ್. ಕೃಷ್ಣಮೂರ್ತಿ ಆಚಾರ್ಯ, ಬಿ.ಎ. (ಆನರ್ಸ್), ಬಿ.ಟಿ.ಎಲ್.
ಅಸಿಸ್ಟೆಂಟ್ ಪ್ರೊಫೆಸರ್,
ಚಾಮರಾಜೇಂದ್ರ ಸಂಸ್ಕೃತ ಕಾಲೇಜ್, ಬೆಂಗಳೂರು, ಇವರಿಂದ

ನಮಗೆ ದೊರೆತಿರುವ ದೇವರನಾಮಗಳಲ್ಲಿ ಅತ್ಯಂತ ಪ್ರಾಚೀನನಾಮವಿದು. ಶ್ರೀ ಶ್ರೀಮದಾಚಾರ್ಯರ ಭವ್ಯಮಂಗಳಮೂರ್ತಿಯನ್ನು ಕಂಡು, ಕಡು ಭಕ್ತಿಯುಕ್ತಸೇವೆಯಿಂದ ಪುಂಡರೀಕಾಕ್ಷನ ತತ್ವವನ್ನು ಸಾಕ್ಷಾತ್ತಾಗಿ ಉಪದೇಶಿಸಿಕೊಂಡ ಶ್ರೀ ನರಹರಿತೀರ್ಥಶ್ರೀಪಾದಂಗಳವರು, ಶ್ರೀಪುರಂದರ ದಾಸರಿಗೆ ಮೂರು ಶತಮಾನಗಳ ಹಿಂದೆಯೇ ಶ್ರೀಹರಿದಾಸಪಂಥವನ್ನು ಪ್ರಾರಂಭಿಸಿ ಪೋಷಿಸಿಕೊಂಡು ಬರುತ್ತಾ ಯೋಗ್ಯಜನರನ್ನು ಶ್ರೀಹರಿ-ವಾಯುಗಳ ಮಾರ್ಗದಲ್ಲಿ ಸೇರಿಸುತ್ತಿದ್ದರೆಂಬುದಕ್ಕೆ ಇದೇ ದೊಡ್ಡ ನಿದರ್ಶನ. ಶಾಸ್ತ್ರಾರ್ಥವನ್ನು ಅರಿತು ಆಚಾರದಲ್ಲಿ ನುರಿತು ವಿಷಯಾಭಿ-ಲಾಷೆಯನ್ನು ಮರೆತು, ಶ್ರೀಹರಿಯ ಹೊರತು ಮತ್ತೊಬ್ಬರು ಸರ್ವೋತ್ತಮ ರಿಲ್ಲವೆಂಬ ತತ್ವವನ್ನು ಪ್ರಾಕೃತ ಜಗತ್ತಿನಲ್ಲಿ ಬೀರಲು ಇಂತಹ ಯತಿಕುಲ-ತಿಲಕರು ಮುಂದಾಳುಗಳಾಗದಿದ್ದರೆ, ಅವರು ಹರಸಿ ಈ ಪಂಥದ ಅಭಿವೃದ್ಧಿ ಯನ್ನು ಬಯಸದಿದ್ದರೆ, ಪುರಂದರಾದಿ ಮಹಾ ಅಪರೋಕ್ಷಿಗಳಾದರೂ ಈ ಪಂಥವನ್ನು ಮುಂದರಿಸಿಕೊಂಡು ಬರುತ್ತಿದ್ದರೇಕೆ? ಹೀಗೆ ಅನೇಕ ದೇವಾಂಶಸಂಭೂತರು ಅನುಸರಿಸಿ ಅಭಿವೃದ್ಧಿಪಡಿಸಿಕೊಂಡುಬಂದ ದಾಸ-ಪಂಥವೂ ಮುಮುಕ್ಷುಗಳ ಪಂಥವೆಂದು ಬೇರೆ ಹೇಳಬೇಕಾದ್ದಿಲ್ಲ.

ಈ ನಾಮದಲ್ಲಿ ಯತಿವರೇಣ್ಯರು ಅಜ್ಞಾನಿಯಾದ ಮನುಜನನ್ನು ಎಚ್ಚರಿಸಿ 'ನೀನೇ ವಿಮರ್ಶಿಸಿನೋಡು' ಎಂಬುದಾಗಿ ಬುದ್ಧಿವಾದವನ್ನು ನುಡಿದಿದ್ದಾರೆ. ಇದೇ ಮುಂದಿನ ದಾಸಾರ್ಯರುಗಳಿಗೆ ಮಾರ್ಗದರ್ಶಕವಾಗಿ

ದಾಸಸಾಹಿತ್ಯವು ಸಮುದ್ರದಂತೆ ಬೆಳೆಯಲು ಅವಕಾಶಮಾಡಿಕೊಟ್ಟಿತು. ಮಾತಿನ ಸರಣಿಯು ಮತ್ತು ಉಪಯೋಗಿಸಿರುವ ಭಾಷೆಯು ೧೫ನೆಯ ಮತ್ತು ೧೬ನೆಯ ಶತಮಾನದ ಭಾಷೆಯಾದ್ದರಿಂದ ಈಗಿನ ಕನ್ನಡಿಗರಿಗೆ ಸ್ವಲ್ಪ ಕಠಿಣವಾಗಿ ತೋರುವುದು ಸಹಜವಾಗಿದೆ. ಆದರೆ ದಾಸಸಾಹಿತ್ಯದ ಚಾರಿತ್ರಿಕದೃಷ್ಟಿಯಿಂದ ಈ ನಾಮವು ಎಷ್ಟು ಹಿರಿದೆಂದು ಓದುಗರಿಗೆ ತಿಳಿಯದೆ ಇರಲಿಕ್ಕಿಲ್ಲ. ಅವರೇ ಪ್ರಾರಂಭಿಸಿದ ದಾಸಪಂಥವು ಅವರ ಕಣ್ಣೆದುರಿನಲ್ಲಿಯೇ ಅಂಕುರಿಸಿ, ಶಾಖೋಪಶಾಖೆಗಳಿಂದ ರಂಜಿಸಿ—ಮಹಾ ಶಾಖಿಯಾಗುವ ಮಟ್ಟಿಗೆ ಅಭಿವೃದ್ಧಿಗೆ ಬಂದಿದ್ದಿತೆಂದು ಹೇಳಬಹುದು.

ಇದರಿಂದ ಪುರಂದರದಾಸಾರ್ಯರೇ ದಾಸಪಂಥದ ಮೂಲಪುರುಷ ರೆಂಬ ಹಲವರ ಅಭಿಪ್ರಾಯವು ಬದಲಾಗುವುದರಲ್ಲಿ ಸಂದೇಹವಿಲ್ಲ.

★

ನಾಮವು ಸುಲಭವಾಗಿ ಅರ್ಥವಾಗುವಂತೆ ಲಘುಟಿಪ್ಪಣಿ ತಾತ್ಪರ್ಯ ಗಳನ್ನು ಕೊಡಲಾಗಿದೆ.

★

ತಿಳಕೊ ನಿನ್ನೊಳಗೆ ನೀನೆ| ಮರುಳೆ
ತಿಳಕೊ ನಿನ್ನೊಳಗೆ ನೀನೆ ಪ

ಮಾನವನು ಹುಚ್ಚನಂತೆ ಕಿಂಕರ್ತವ್ಯತಾಮೂಢನಾಗಿದ್ದಾನೆ. ಹೀಗಿರುವಾಗ ಅವನು ಇಷ್ಟಾದರೂ ತನ್ನಲ್ಲಿ ತಾನೇ ವಿಮರ್ಶಿಸಿದರೆ ತನ್ನ ಕರ್ತವ್ಯವೇನೆಂದು ಅರಿಯಲು ಸಾಧ್ಯವಾದೀತು.

ತಿಳಕೊ ನಿನ್ನೊಳಗೆ ನೀ| ಅಳಕೋ ಪೋದಾಯುಷ್ಯ
ಕಳಕೊ ದುಷ್ಕರ್ಮವನ್ನು| ವಿಷಯದಿಂ
ಸೆಳಕೋ ಇಂದ್ರಿಯಗಳನ್ನು| ಸ್ವಲ್ಪಾರು
ಗಳಿಸಿಕೋ ಜ್ಞಾನವನ್ನು ಮರುಳೆ ಅ.ಪ

ಎಲೈ ಹುಚ್ಚುಮಾನವ, ನಿನ್ನ ಆಯುಸ್ಸು ಎಷ್ಟು (ವ್ಯರ್ಥವಾಗಿ) ಹೋಯಿತೆಂದು ನೀನು ತಿಳಿದುಕೋ. ಉಳಿದ ಆಯುಸ್ಸನ್ನಾದರೂ ನಿನ್ನ ದುಂತವನ್ನು ಕಳೆದುಕೊಳ್ಳುವುದರಲ್ಲಿ ಸಾರ್ಥಕಮಾಡಿಕೊ. ಇಂದ್ರಿಯಗಳು ವಿಷಯಕ್ಕೆ ಸಿಕ್ಕಿ ನಿನ್ನನ್ನು ನರಕಾದ್ಯನರ್ಥಕ್ಕೆ ಭಾಗಿಯನ್ನಾಗಿ ಮಾಡದಂತೆ

ವಿಷಯಸುಖಾಭಿಲಾಷೆಯಿಂದ ಅವುಗಳನ್ನು ದೂರವಾಗಿಡು- ಹುಟ್ಟಿದುದಕ್ಕೆ ಸ್ವಲ್ಪವಾದರೂ ಶ್ರೀಹರಿ ಸರ್ವೋತ್ತಮನೆಂಬ ಜ್ಞಾನವನ್ನು ಗಳಿಸಿಕೋ (ಸ್ವಲ್ಪಾರು = ಸ್ವಲ್ಪವಾದರೂ) ಜ್ಞಾನವು ಒಂದೇ ಜನ್ಮದಲ್ಲಿ ಗಳಿಸಿಕೊಳ್ಳ ತಕ್ಕ ವಸ್ತುವಲ್ಲ. "ಬಹೂನಾಂ ಜನ್ಮಾನಾಂ ಅಂತೇ ಜ್ಞಾನವಾನ್ ಮಾಂ ಪ್ರಪದ್ಯತೇ" ಎಂಬಂತೆ ಅನೇಕ ಜನ್ಮಗಳಲ್ಲಿ ಗಳಿಸಬೇಕಾದ ಪದಾರ್ಥವದು. ಆದರೂ ಈ ಜನ್ಮದಲ್ಲಿ ಎಷ್ಟು ಸಾಧ್ಯವೋ ಅಷ್ಟು ಸ್ವಲ್ಪವಾದರೂ ಜ್ಞಾನವನ್ನು ಇನ್ನುಳಿದಿರುವ ಆಯುಸ್ಸಿನಲ್ಲಿ ಸಂಪಾದಿಸಿಕೊಂಡು ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕೆಂದು ತಾತ್ಪರ್ಯ.

ಅಹರನಿದ್ರಾ ಸಂಗ ಮಹದಾದಿ ಕ್ರಿಮಿ ಕೀಟ
ಸಹವಾಸ ದುರ್ಯೋನಿಗೂ। ಇದ್ದದ್ದು
ಬಹುಶ ತಂದುಕೊ ಮನಸಿಗೂ। ಅಷ್ಟೇನೆ
ಸುಹಿತವೆಂಬೇನೆ ನಿನಗೂ। ಈ ಮಾತು
ವಿಹಿತವಲ್ಲವೋ ಎಂದಿಗೂ। ಮರುಳೆ ೧

ಆಹಾರ ನಿದ್ರಾ, ಮೈಥುನಾದಿಗಳು ದೊಡ್ಡ ಪ್ರಾಣಿಗಳಿಂದ ಹಿಡಿದು ಸಣ್ಣ ಸಣ್ಣ ಕ್ರಿಮಿ ಕೀಟಗಳೇ ಮೊದಲಾದ ಕ್ಷುದ್ರಜಂತುಗಳಿಗೂ ಇದ್ದದ್ದೇ. ಅದನ್ನು ಮಾನವನು ಮನಸ್ಸಿಗೆ ತಂದುಕೊಳ್ಳಬೇಕು. ತಾನೂ ಆಹಾರ ನಿದ್ರಾ ಭಯ ಮೈಥುನಗಳಲ್ಲಿ ಆಸಕ್ತನಾಗಿದ್ದರೆ ಸಾಕೆಂದು ತಿಳಿಯುವುದು ದಡ್ಡತನ ಇದಿಷ್ಟರಿಂದ ಅವನು ತನ್ನ ಹಿತವನ್ನು ಸಾಧಿಸಿಕೊಳ್ಳಲಾರ. ಮೃಗಗಳಂತೆ ಇರುವುದು ಮಾನವನಾದ ಇವನಿಗೆ ಎಂದೂ ವಿಹಿತವಲ್ಲ. ಅಹರ = ಆಹಾರ, ಸುಹಿತವೆಂಬೇನೆ = ಒಳ್ಳೆಯ ಹಿತಕಾರಿ ಎನ್ನುವೆನೆ?)

ಸಾದರದಿ ಜನರಿಂದ ಅಹುದೆನಿಸಿಕೊಂಬುವುದು
ಸಾಧಾರಣವಲ್ಲೆಂದಿಗೂ। ಚಿತ್ತೈಸಿ
ವೋದದಲಿ ಚರಿಸೊ ಯಿಂದೂ। ಕೃಷಿಪೋಷ್ಯ-
ವಾದ ವೃಷಭಾದಿಗಿಂದೂ। ಈ ಧರ್ಮ
ಸಾಧಿಸದೆ ಪ್ರಾಪ್ಯವೇನೋ। ಮರುಳೆ ೨

ಜನರು ಪ್ರೀತಿಪೂರ್ವಕವಾಗಿ ಸಜ್ಜನನೆಂದು ಹೊಗಳುವಂತೆ ಜೀವನವನ್ನು ನಡೆಸಬೇಕು. ಇದೂ ಬಹು ಸುಲಭವಾದ ಕೆಲಸವಲ್ಲ.

ಬಹುಕಾಲಸಾಧನೆಯಿಂದ ಮಾತ್ರ ಸಾಧ್ಯವಾಗುವುದು. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಸಂತೋಷದಿಂದ ಶ್ರೀಹರಿಪ್ರೀತಿಕರವಾದ ಕರ್ಮಗಳನ್ನು ಆಚರಿಸು. ವ್ಯವಸಾಯಕ್ಕೆ ಅನುಕೂಲವಾದ ಎತ್ತು ಮುಂತಾದ ಪಶುಗಳು ಕೂಡ ಯುಕ್ತರೀತಿಯಲ್ಲಿ ಬಹುಕಾಲ ದುಡಿದರಲ್ಲವೇ ಯಜಮಾನನ ಪ್ರೀತಿಗೆ ಪಾತ್ರವಾಗಿ ಹೊಗಳಿಸಿಕೊಳ್ಳುವುದು. ಹಾಗೆಯೇ ಪ್ರತಿಯೊಬ್ಬ ಮಾನವನೂ ತನ್ನ ಜೀವನದಲ್ಲಿ ಸಜ್ಜನನೆನಿಸಿಕೊಂಡು ಬಾಳಬೇಕೆಂಬ ಧ್ಯೇಯವನ್ನು ಸಾಧಿಸಿಕೊಳ್ಳಬೇಕು. (ಚಿತ್ತೈಸಿ = ಚಿತ್ತವಿಸಿ, ಚಿತ್ತವಿಟ್ಟು, ಇಂದೂ = ಇಂದಿಗೂ)

ಸೋತು ನಡೆದ್ಹಾಂಗೆ ಬಹುಮಾತುಗಳ ಚಾತುರ್ಯ
ನೀತಿವಾದದಲಿ ಧೈರ್ಯ| ಮೊದಲಾದ
ನೀತಿಯನು ನಡಿಸೊ ಪಿರಿಯ-ಜನರ ಬಹು
ಪ್ರೀತಿಯನು ಪಡಿಸೊ ಚರಿಯ| ಹಾಸ್ಯಗಾ-
ರಾತ ಮಾಡುವುದನರಿಯ| ಮರುಳೆ ೩

ಸೋತು ನಡೆಯುತ್ತಿದ್ದಂತೆ ತೋರಿಸಿ ಚಾತುರ್ಯವಾದ ಮಾತುಗಳಿಂದ ಧೈರ್ಯದಿಂದ, ತನಗಿಂತ ಉತ್ತಮರಾದ ಹಿರಿಯರ ಪ್ರೀತಿಯನ್ನು ಸಂಪಾದಿಸುವ ಕೆಲಸಗಳನ್ನು ವಂಚನೆಯ ಮನೋಭಾವದಿಂದೊಡಗೂಡಿ ಮಾಡುವುದು ಉಚಿತವಲ್ಲ. ಹಾಸ್ಯಗಾರನೂ ತನ್ನ ಚಾತುರ್ಯದಿಂದ ತಾನು ಸೋತವನಂತೆ ನಟಿಸಿ ಪ್ರೇಕ್ಷಕರ ಮನಸ್ಸನ್ನು ಒಲಿಸಿಕೊಳ್ಳುವನಲ್ಲವೇ! ಅವನಂತೆಯೇ ನೀನೂ ಆಗಬಾರದು. (ನಡೆದ್ಹಾಂಗೆ = ನಡೆದ ಹಾಗೆ, ನಡಿಸೊ = ನಡೆಸುವ, ಪಡಿಸೊ = ಪಡಿಸುವ, ಚರಿಯ = ಚರ್ಯ, ಹಾಸ್ಯಗಾರಾತ = ಹಾಸ್ಯಗಾರ)

ಧನವ ದೊರಕಿಸಿ ದಿವ್ಯ| ಮನೆಮಾಳ್ಗಳನೆ ರಚಿಸಿ
ದಿನದಿನಕೆ ಪೆಚ್ಚಿಸುತ್ತಾ| ನಾಲ್ವರೊಳು
ಘನವಂತನೆಂದೆನಿಸುತ-ಇದ್ದದ್ದು
ಖನಗ ವೇಶ್ಯಾದಿ ಸಹಿತ| ಅಂತ್ಯಜಗೆ
ಕೊನೆಜಾತಿಗಲ್ಲ ನೀತ| ಮರುಳೆ ೪

ಬೇಕಾದಷ್ಟು ಹಣವನ್ನು ಸಂಪಾದಿಸಿ ಎತ್ತರವಾದ ಮಹಡಿಮನೆಗಳನ್ನು ಕಟ್ಟಿಸಿಕೊಂಡು, ಆ ಹಣವನ್ನು ಅನೇಕ ರೀತಿಯಿಂದ ಅಭಿವೃದ್ಧಿಪಡಿಸಿಕೊಂಡು ತನ್ನ ಸುತ್ತಮುತ್ತಲಿರುವವರಲ್ಲಿ ತಾನು ಸಾಹುಕಾರ (ಧನವಂತ) ನೆಂದೆನಿಸಿ ಬಾಳಿದ್ದೆಲ್ಲವೂ ವೇಶ್ಯೆಯರಿಗೆ, ಅಂತ್ಯಜರಿಗೆ, ಚತುರ್ಥವರ್ಣದವರಿಗೆ ಸಹ ಒಪ್ಪದು. ಅವರಿಗೂ ಒಂದು ನಿಯಮವಿದೆ. (ಮುಮುಕ್ಷುವಾದವನು ಕೇವಲ ಹಣದಾಸೆಯಿಂದ ಜೀವಿಸುವುದು ಮೋಕ್ಷಮಾರ್ಗಕ್ಕೆ ತಕ್ಕದ್ದಲ್ಲವೆಂದು ತಾತ್ಪರ್ಯ. ಮಾಳ್ಗಳನೆ = ಮಾಡಗಳನೆ, ನಿವೇಶನ, ಘನವಂತ = ಘನತೆವಂತ, ಖನಗ = ?, ಕೊನೆಜಾತಿ = ಶೂದ್ರಜಾತಿ)

ವಿಸಾರಿ ವಸನಾಶನದ| ಸಾರಸುಖವನ್ನು ತನಗನು
ಸಾರಿ ಜನರ ಕೂಡಿ| ನಿರ್ಭಯದಿ
ಬಾರಿ ಬಾರಿಯಲಿ ರೂಢಿ-ಯೊಳಗಿದ್ದ
ಘೋರ ಯಾತ್ರೆಗಳ ಮಾಡಿ| ಸಂಚರಿಪ
ಬೈರಾಗಿ ಗಣವ ನೋಡಿ| ಮರುಳೆ *

ಆಹಾರ, ಬಟ್ಟೆ ಮೊದಲಾದ ವೈಷಯಿಕಸುಖಗಳನ್ನು ಬಿಟ್ಟು, ತನ್ನನ್ನು ಅನುಸರಿಸಿ ಬರುವ ಸಜ್ಜನರನ್ನು ಕೂಡಿಕೊಂಡು ಯಾವ ಭಯವೂ ಇಲ್ಲದೆ ಅನೇಕ ಬಾರಿ ಪ್ರಸಿದ್ಧವಾದ ಕಠಿಣತರವಾದ ತೀರ್ಥ-ಯಾತ್ರೆಗಳನ್ನು ಮಾಡುತ್ತ ಮಾನವನು ತನ್ನ ಆಯುಸ್ಸನ್ನು ಕಳೆಯಬೇಕು. ಆದರೆ ಬೈರಾಗಿಗಳಂತೆ ಹೊಟ್ಟೆ ಹೊರೆಯುವುದಕ್ಕೇ ಆ ಕೆಲಸಗಳನ್ನು ಮಾಡಬಾರದು. ಈ ಪದ್ಯಕ್ಕೆ ಮುಂದಿನ ಪದ್ಯದೊಡನೆ ಅನ್ವಯ. (ವಿಸಾರಿ = ಬಿಟ್ಟು, ಬಾರಿಬಾರಿ = ಅನೇಕಸಲ, ಘೋರ = ಕಠಿಣತರ).

(ಸಶೇಷ)

Printed by Sri R. Venkataramiah at Parimala Printing Works, 20, IV Main Road, Chamarajpet, Bangalore-2 and Edited and Published by Sri Haridasaratnam Gopal Das at Sri Raghavendra Colony, Chamarajpet, Bangalore-2